2018 ಕ.ತೀ.ವ. 691

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್.ಪಾಟೀಲ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಸೋಮಶೇಖರ್

ಶ್ರೀಮತಿ ನೀಲವ್ವ ಮತ್ತು ಇತರರು –ವಿರುದ್ಧ– ಶ್ರೀ ಮುತ್ತಣ್ಣ ಮತ್ತು ಇನ್ನೊಬ್ಬರು*

ಸಿವಿಲ್ ಪ್ರಕ್ರಿಯಾ ಸಂಹಿತೆಯ XLI ಕ್ರಮಾದೇಶ 1ನೇ ನಿಯಮದ 96ನೇ ಪ್ರಕರಣದ ಮೇರೆಗಿನ ನಿಯತ ಮೊದಲ ಅಪೀಲು.

ಈ ಅಪೀಲಿನಲ್ಲಿನ ಅಪೀಲುದಾರರು, ಒ.ಎಸ್. ಸಂಖ್ಯೆ: 14/2009ರಲ್ಲಿ ವಾದಿಗಳಾಗಿದ್ದರು. ಪ್ರತ್ಯರ್ಜಿದಾರ ಸಂಖ್ಯೆ–1 ಸಹಿತ ತಮ್ಮನ್ನು ದಾವೆ ನಿಗದಿ ಸ್ವತ್ತುಗಳ ನಿರುಪಾಧಿಕ ಮಾಲೀಕರೆಂದು ಘೋಷಿಸಬೇಕೆಂದು ಕೋರಿ ಅವರು ದಾವೆ ಸಲ್ಲಿಸಿದ್ದರು. ಅಲ್ಲದೆ, ಮುತ್ತಣ್ಣ ಕುರಿ, ಪ್ರತ್ಯರ್ಜಿದಾರ ಸಂಖ್ಯೆ–1 ಇವರ ಪರವಾಗಿ, ಅವರ ಪೋಷಕ ಫಕೀರಪ್ಪ ಜಗಲಿ ಇವರು ಪ್ರತಿನಿಧಿಸಿದಂತೆ ಮೃತ ಫಕೀರವ್ವ ಕುರಿ ಇವರು ಬರೆದುಕೊಟ್ಟಿರುವವರೆಂದು ಹೇಳಲಾದ ದಿನಾಂಕ: 15.03.2008ರ ನೋಂದಾಯಿತ ಉಯಿಲಿಗೆ ಸಂಬಂಧಿಸಿದಂತೆ, ಅದು ಅಕೃತ ಮತ್ತು ಶೂನ್ಯವೆಂದು ಘೋಷಿಸಬೇಕೆಂದು ಅವರು ಕೋರಿದ್ದರು. ಇತರ ಪ್ರಾಸಂಗಿಕ ಪರಿಹಾರಗಳನ್ನು ಸಹ ದಾವೆಯಲ್ಲಿ ಕೋರಲಾಗಿತ್ತು. ಪೂರ್ಣ ಪ್ರಮಾಣದ ವಿಚಾರಣೆಯನ್ನು ನಡೆಸಿದ

* ಆರ್‌ಎಫ್‌ಎ ಸಂಖ್ಯೆ: 4131/2012, ದಿನಾಂಕ: 19ನೇ ಏಪ್ರಿಲ್, 2017

ತರುವಾಯ, ಕೆಳ ನ್ಯಾಯಾಲಯವು ದಾವೆಯನ್ನು ವಜಾಗೊಳಿಸಿದೆ. ಅದರಿಂದ ಬಾಧಿತರಾಗಿ, ಪ್ರಸ್ತುತ ನಿಯತ ಪ್ರಥಮ ಅಪೀಲನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ನಿಯಮ–1ರ ಕ್ರಮಾದೇಶ–XLI ರೊಂದಿಗೆ ಓದಲಾದ 96ನೇ ಪ್ರಕರಣದ ಮೇರೆಗೆ ಸಲ್ಲಿಸಲಾಗಿದೆ.

ವಾದಿಗಳು ದಾವೆ ಸ್ವತ್ತಿನ ನಿರುಪಾಧಿಕ ಮಾಲೀಕರೇ ಮತ್ತು ಫಕೀರವ್ವ ಅವರು ಬರೆದುಕೊಟ್ಟ ಉಯಿಲು ಸಿಂಧುವಾದುದೇ ಎಂಬುದು ಪರಿಗಣಿಸಬೇಕಾದ ವಿವಾದವಾಗಿದೆ. ಸಹೋದರರಿಬ್ಬರೂ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂಬುದು ಸ್ಪಷ್ಟ ಸಂಗತಿ. ಅವರು ಸ್ವತ್ತಿನಲ್ಲಿನ ತಮ್ಮ ನಿಶ್ಚಿತ ಪಾಲನ್ನು ಅನುಭವಿಸುತ್ತಿದ್ದರು ಮತ್ತು ಯಲ್ಲಪ್ಪ ಅವರ ಮರಣಾ ನಂತರ, ಫಕೀರವ್ವ ಅವರು ಸ್ವತ್ತಿನಲ್ಲಿನ ತನ್ನ ಪಾಲನ್ನು ಅನುಭವಿಸುತ್ತಿದ್ದರು. ಆದಾಗ್ಯೂ, ಡಿಡಬ್ಲ್ಯು–4 ಇವರ ಸಾಕ್ಷ್ಯವು, ಫಕೀರವ್ವ ಇವರ ಹೆಸರಿನಲ್ಲಿದ್ದ ಆಕೆಯ ಪಾಲಿಗೆ ಬಂದಿದ್ದಂಥ ಜಮೀನುಗಳಲ್ಲಿ ಅವರು ಸಾಗುವಳಿ ಮಾಡುತ್ತಿದ್ದರೆಂಬುದನ್ನು ತೋರಿಸುತ್ತದೆ. ಆದ್ದರಿಂದ, ಪಿಡಬ್ಲ್ಯು–1 ಇವರ ಪಾಟಿ ಸವಾಲಿನಲ್ಲಿ ಒಪ್ಪಿಕೊಂಡಿರುವುದನ್ನು ಒಳಗೊಂಡು ದಾಖಲೆಯಲ್ಲಿನ ಮುಖ್ಯ ಸಂಗತಿಗಳು, ಸಹೋದರರಿಬ್ಬರೂ ಅವರಿಗೆ ಸಂಬಂಧಿಸಿದ ಪಾಲುಗಳ ಪೈಕಿಯಿಂದ ಅವರವರ ಭಾಗಗಳನ್ನು ಪರಭಾರೆ ಮಾಡುವ ಮೂಲಕ ಅವರವರಿಗೆ ಸಂಬಂಧಿಸಿದ ಪಾಲುಗಳೊಂದಿಗೆ ವ್ಯವಹರಿಸುತ್ತಿದ್ದರೆಂಬುದು ಕಂಡುಬರುತ್ತದೆ. ಇದು, ಅವರು ಸ್ವತ್ತುಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದರೆಂಬ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಕುಟುಂಬದಲ್ಲಿ ಗಡಿಗಳು ಮತ್ತು ಗಡಿಕಲ್ಲುಗಳ ಮೂಲಕ ಭಾಗವಾಗಿತ್ತೇ ಎಂಬ ಪ್ರಶ್ನೆಯು ಈ ಮೊಕದ್ದಮೆಯಲ್ಲಿ ಪರ್ಯಾಲೋಚನೆಗೆ ಉದ್ಭವಿಸುವುದಿಲ್ಲ. ಸಂಬಂಧಪಟ್ಟ ಪಕ್ಷಕಾರರು ಅನುಭವಿಸುತ್ತಿದ್ದರೆಂಬ ಸ್ವತ್ತಿನೊಂದಿಗೆ ಅವರು ವ್ಯವಹರಿಸುತ್ತಿದ್ದರು

**ಮತ್ತು ಅದಕ್ಕನುಸಾರವಾಗಿ, ಫಕೀರವ್ವ ಅವರು ತನ್ನ ಸ್ವಾಧೀನದಲ್ಲಿದ್ದ ಭಾಗವನ್ನು ಉಯಿಲು ಮಾಡಿಕೊಟ್ಟಿದ್ದರು ಹಾಗೂ ಪ್ರತಿವಾದಿ ಮುತ್ತಣ್ಣನ ಹೆಸರಿನಲ್ಲಿ ತನ್ನ ಪತಿಯು ಮರಣಾ ನಂತರ ಆಕೆ ಉತ್ತರಾಧಿಕಾರಿಯಾಗಿ ಅನುಭವಿಸುತ್ತಿದ್ದರು ಎಂಬ ವಾಸ್ತವಾಂಶ ಉಳಿಯುತ್ತದೆ. ಆದುದರಿಂದ, ಪ್ರತಿವಾದಿಗಳು ಸ್ವತ್ತುಗಳ ನಿರುಪಾಧಿಕ ಮಾಲೀಕರು ಮತ್ತು ವಿವಾದದಲ್ಲಿರುವ ಉಯಿಲನ್ನು ಫಕೀರವ್ವ ಅವರು ಯುಕ್ತವಾಗಿ ಬರೆದಿಲ್ಲ ಎಂದು ಅವರು ಮಾಡಿದ ಕ್ಲೇಮು ಸಮರ್ಥನೀಯುವಾಗಿರುವುದಿಲ್ಲವಾದುದರಿಂದ ಅಪೀಲನ್ನು ವಜಾಗೊಳಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ:*** ***ಪ್ಯಾರಾಗಳಲ್ಲಿ***

*1. ಐಎಲ್ಆರ್ 1979 ಸಂಪುಟ 1*
*ಸಂಕ್ಷಿಪ್ತ ಟಿಪ್ಪಣಿ ಬಾಬು 10 ಪುಟ–229*
*ಶಿವಾಜಿ ರಾವ್ ಎಮ್.ವಿ. –ವಿರುದ್ಧ–*
*ಕೆ. ಎಸ್. ನಾರಾಯಣ ರಾವ್ ಮತ್ತು ಇತರರು (ಉಲ್ಲೇ) 12*
*2. ಐಎಲ್ಆರ್ 1988 ಕೆಎಆರ್–2761*
*ನೀಲವ್ವ –ವಿರುದ್ಧ– ಶಿವವ್ವ (ಉಲ್ಲೇ) 15*
*3. ಎಐಆರ್ 2004 ಎಸ್‌ಸಿ 436*
*ಭಗತ್ ರಾಮ್ ಮತ್ತು ಮತ್ತೊಬ್ಬರು*
*–ವಿರುದ್ಧ– ಸುರೇಶ್ ಮತ್ತು ಇತರರು (ಉಲ್ಲೇ) 17*

ಅರ್ಜಿದಾರರ ಪರ : ಶ್ರೀ ಎಮ್. ಜಿ. ನಾಗನೂರಿ, ವಕೀಲರು;
1ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಹೇಮಲೇಖ, ಕೆ.ಎಸ್. ವಕೀಲರು;
2ನೇ ಪ್ರತ್ಯರ್ಜಿದಾರರಿಗೆ ನೋಟೀಸ್ ಜಾರಿ ಮಾಡಲಾಗಿದೆ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಬಿ.ಎಸ್.ಪಾಟೀಲ್:**

ಈ ಅಪೀಲಿನಲ್ಲಿನ ಅಪೀಲುದಾರರು ಒ.ಎಸ್. ಸಂಖ್ಯೆ: 14/2009ರಲ್ಲಿ ವಾದಿಗಳಾಗಿದ್ದರು. ಪ್ರತ್ಯರ್ಜಿದಾರ ಸಂಖ್ಯೆ–1 ಸಹಿತ ತಮ್ಮನ್ನು ದಾವಾ ಸ್ವತ್ತುಗಳ ನಿರುಪಾಧಿಕ ಮಾಲೀಕರೆಂದು ಘೋಷಿಸಬೇಕೆಂದು ಕೋರಿ ಅವರು ದಾವೆ ಸಲ್ಲಿಸಿದ್ದರು. ಅಲ್ಲದೆ, ಮುತ್ತಣ್ಣ ಕುರಿ, ಪ್ರತ್ಯರ್ಜಿದಾರ ಸಂಖ್ಯೆ–1 ಇವರ ಪರವಾಗಿ, ಅವರ ಪೋಷಕ ಫಕೀರಪ್ಪ ಜಗಲಿ ಇವರು ಪ್ರತಿನಿಧಿಸಿದಂತೆ ಮೃತ ಫಕೀರವ್ವ ಕುರಿ ಇವರು ಬರೆದುಕೊಟ್ಟಿರುವರೆಂದು ಹೇಳಲಾದ ದಿನಾಂಕ: 15.03.2008ರ ನೋಂದಾಯಿತ ಉಯಿಲಿಗೆ ಸಂಬಂಧಿಸಿದಂತೆ, ಅದು ಅಕೃತ ಮತ್ತು ಶೂನ್ಯವೆಂದು ಘೋಷಿಸಬೇಕೆಂದು ಅವರು ಕೋರಿದ್ದರು. ಇತರ ಪ್ರಾಸಂಗಿಕ ಪರಿಹಾರಗಳನ್ನು ಸಹ ದಾವೆಯಲ್ಲಿ ಕೋರಲಾಗಿತ್ತು. ಪೂರ್ಣ ಪ್ರಮಾಣದ ವಿಚಾರಣೆಯನ್ನು ನಡೆಸಿದ ತರುವಾಯ, ಕೆಳ ನ್ಯಾಯಾಲಯವು ದಾವೆಯನ್ನು ವಜಾಗೊಳಿಸಿದೆ. ಅದರಿಂದ ಬಾಧಿತರಾಗಿ, ಪ್ರಸ್ತುತ ನಿಯತ ಪ್ರಥಮ ಅಪೀಲನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (ಸಂಕ್ಷಿಪ್ತದಲ್ಲಿ 'ಸಿಪಿಸಿ' ಎಂದು ಉಲ್ಲೇಖಿಸಲಾಗಿದೆ) ನಿಯಮ–1ರ ಕ್ರಮಾದೇಶ–XLIರೊಂದಿಗೆ ಓದಲಾದ 96ನೇ ಪ್ರಕರಣದ ಮೇರೆಗೆ ಸಲ್ಲಿಸಲಾಗಿದೆ.

2. ಅನುಕೂಲದ ಉದ್ದೇಶಕ್ಕಾಗಿ, ಈ ಅಪೀಲಿನ ಪಕ್ಷಕಾರರನ್ನು ಮೂಲ ದಾವೆಯಲ್ಲಿ ಅವರ ಹೆಸರಿನ ಕ್ರಮಸರಣಿಯನುಸಾರ ಉಲ್ಲೇಖಿಸಲಾಗಿದೆ.

3. ಈ ಮೊಕದ್ದಮೆಯು ಒಳಗೊಂಡಿರುವ ವಾಸ್ತವಾಂಶಗಳು ಈ ಮುಂದಿನಂತಿವೆ:

ಫಕೀರಪ್ಪ ಕುರಿ ಎಂಬುವವರು, ಲಾಲಪ್ಪ ಎಫ್. ಕುರಿ ಮತ್ತು ಯಲ್ಲಪ್ಪ ಎಫ್. ಕುರಿ, ಎಂಬ ಹೆಸರಿನವರ ವಂಶಜನಾಗಿದ್ದು, ತನ್ನ ಇಬ್ಬರು ಗಂಡು

ಮಕ್ಕಳು ಹಾಗೂ ಶ್ರೀಮತಿ ನಾಗವ್ವ ಎಂಬ ಮಗಳನ್ನು ಬಿಟ್ಟು ಮೃತರಾದರು. ನಾಗವ್ವ ಇವರು ಮಕ್ಕಳಿಲ್ಲದೆ ಮೃತರಾದರು. ಇಬ್ಬರು ಗಂಡು ಮಕ್ಕಳ ಪೈಕಿ, ಎರಡನೇ ಮಗನಾದ ಯಲ್ಲಪ್ಪ ಎಫ್. ಕುರಿ ಸಹ ಮಕ್ಕಳಿಲ್ಲದೆ ಅವರ ಪತ್ನಿ ಶ್ರೀಮತಿ ಫಕೀರವ್ವ, ಮರಣಶಾಸನಕರ್ತೆಯನ್ನು ಬಿಟ್ಟು ಮರಣ ಹೊಂದಿದರು, ಇವರು ನೀಲಪ್ಪ ಕುರಿ ಇವರ ಮಗನಾದ ಮುತ್ತಣ್ಣ, 1ನೇ ಪ್ರತ್ಯರ್ಜಿದಾರ ಇವರ ಪರವಾಗಿ ದಿನಾಂಕ: 15.03.2008ರಂದು ನೋಂದಾಯಿತ ಉಯಿಲನ್ನು ಬರೆದರು. ಈ ಮುತ್ತಣ್ಣ ಅವರು ವಾದಿ ಸಂಖ್ಯೆ–3 (ನೀಲಪ್ಪ ಕುರಿ ಮತ್ತು ಸತ್ಯವ್ವ) ಇವರ ಮಗನಲ್ಲದೆ ಬೇರಾರೂ ಅಲ್ಲ. ಸದರಿ ಸತ್ಯವ್ವ ಅವರು ಮರಣಶಾಸನಕರ್ತೆಯಾದ ಫಕೀರವ್ವ ಇವರ ಸಹೋದರಿ. ಲಾಲಪ್ಪ ಎಫ್. ಕುರಿ ಇವರು ನೀಲವ್ವ, ವಾದಿ ಸಂಖ್ಯೆ–1 ಇವರೊಂದಿಗೆ ವಿವಾಹ ಸಂಬಂಧ ಹೊಂದಿದ ಕಾರಣದಿಂದ, ಕಾನೂನು ದೃಷ್ಟಿಯಿಂದ ಲಾಲಪ್ಪ ಎಫ್. ಕುರಿ ಇವರಿಗೆ ಜನಿಸಿದ ಎಲ್ಲಾ ವಾದಿಗಳು ಉತ್ತರಾಧಿಕಾರಿಗಳು ಎಂಬುದು ವಾದಿಗಳ ವಾದವಾಗಿದೆ. ವಾದಿ ಸಂಖ್ಯೆ: 2 ರಿಂದ 7 ಇವರೆಲ್ಲರೂ ಲಾಲಪ್ಪ ಮತ್ತು ನೀಲವ್ವ ಇವರ ಮಕ್ಕಳಾಗಿದ್ದಾರೆ. ಅನುಕೂಲದ ದೃಷ್ಟಿಯಿಂದ, ವಾದಪತ್ರದಲ್ಲಿ ತೋರಿಸಲಾದಂತೆ, ಪಕ್ಷಕಾರರ ವಂಶಾವಳಿಯನ್ನು ಈ ಕೆಳಗೆ ಉದ್ಧರಿಸಲಾಗಿದೆ:

ಫಕೀರಪ್ಪ ಕುರಿ (ಮೃತರಾಗಿದ್ದಾರೆ)

| ↓ | ↓ | ↓ |
|---|---|---|
| ಲಾಲಪ್ಪ ಎಫ್. ಕುರಿ | ಯಲ್ಲಪ್ಪ ಎಫ್. ಕುರಿ (28.12.2002ರಂದು ಮರಣ ಹೊಂದಿದ್ದಾರೆ) | ನಾಗವ್ವ (ಮರಣ ಹೊಂದಿದ್ದಾರೆ) |
| ↓ | ↓ | |
| ನೀಲವ್ವ (ಪತ್ನಿ) (ವಾದಿ–1) | ಫಕೀರವ್ವ (ಪತ್ನಿ) (27.03.2002ರಂದು ಮರಣ ಹೊಂದಿದ್ದಾರೆ) | |
| ↓ | | |

| | | | | |
|---|---|---|---|---|
| ↓ | ↓ | ↓ | ↓ | ↓ |
| ಫಕೀರವ್ವ ಶಾಂತವ್ವ (ಪಿ–2) (ಪಿ–7) | ನೀಲಪ್ಪ (ಪಿ–3) | ಯಲ್ಲವ್ವ (ಪಿ–4) | ಬಸಪ್ಪ (ಪಿ–5) | ಮೈಲಾರೆಪ್ಪ (ಪಿ–6) |

ನೀಲಪ್ಪ ↓ ಸತ್ಯವ್ವ (ಪತ್ನಿ) ↓ ಮುತ್ತಣ್ಣ (ಪ್ರತಿವಾದಿ–1)

4. ಪ್ರಸ್ತುತ ಅಪೀಲಿನ ಉದ್ದೇಶಕ್ಕಾಗಿ, ಮರಣಶಾಸನಕರ್ತೆ ಫಕೀರವ್ವ–ವಾದಿ ಸಂಖ್ಯೆ–3, ನೀಲಪ್ಪ, ಆತನ ಮಡದಿ ಸತ್ಯವ್ವ ಮತ್ತು ಅವರ ಮಗ ಮುತ್ತಣ್ಣ ಇವರ ನಡುವಿನ ಪರಸ್ಪರ ಸಂಬಂಧಕ್ಕೆ ಒತ್ತು ನೀಡುವುದು ಅವಶ್ಯವಾಗಿದ್ದು, 1ನೇ ಪ್ರತಿವಾದಿ ಮತ್ತು ಉಯಿಲಿನಲ್ಲಿ ಅಪ್ರಾಪ್ತ ವಯಸ್ಕ ಮುತ್ತಣ್ಣನ ಪೋಷಕರಾಗಿ ತೋರಿಸಲಾಗಿರುವಂಥ 2ನೇ ಪ್ರತಿವಾದಿ ಫಕೀರಪ್ಪ ಇವರು ಸಹ ಮುಖ್ಯರಾಗುತ್ತಾರೆ.

5. 1ನೇ ಪ್ರತಿವಾದಿಯು ವಾದಿಸಿದ ಉಯಿಲು ಸೃಷ್ಟಿಸಲಾದುದು ಎಂಬುದು ವಾದಿಯ ವಾದವಾಗಿದೆ. ಯಲ್ಲಪ್ಪ ಎಫ್. ಕುರಿ ಮತ್ತು ಆತನ ಪತ್ನಿ ಫಕೀರವ್ವ ಇವರ ಕುಟುಂಬಕ್ಕೆ ಸಂಬಂಧಿಸಿರದ 2ನೇ ಪ್ರತಿವಾದಿಯ ಪರವಾಗಿ ಸ್ವತ್ತಿನ ಉಯಿಲು ಬರೆದುಕೊಡಬೇಕೆಂದು ಕೋರಿರುವಷ್ಟರಮಟ್ಟಿಗೆ, ಉಯಿಲು ಅಸ್ವಾಭಾವಿಕವಾದ ರೀತಿಯ ಮನೋವೃತ್ತಿಯದ್ದಾಗಿದೆ ಎಂಬುದು ಸಹ ಅವರ ವಾದವಾಗಿದೆ. ಈ ಹಿನ್ನಲೆಯಲ್ಲಿ, ದಿನಾಂಕ: 15.03.2008ರಂದು ಬರೆದುಕೊಟ್ಟ ಉಯಿಲು ಅಕೃತ ಮತ್ತು ಶೂನ್ಯವೆಂಬ ಘೋಷಣಾತ್ಮಕ ಪರಿಹಾರವನ್ನು ಸಹ ಕೋರಲಾಗಿದೆ.

6. ಅಪ್ರಾಪ್ತ ವಯಸ್ಕನಾದ 1ನೇ ಪ್ರತಿವಾದಿಯು, ನೀಲಪ್ಪ ಕುರಿ ಇವರ ಪತ್ನಿಯಾದ ತನ್ನ ತಾಯಿ ಶ್ರೀಮತಿ ಸತ್ಯವ್ವ ಇವರ ಮೂಲಕ ಪ್ರತಿನಿಧಿತ ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಉಯಿಲಿಗೆ ಸಂಬಂಧಿಸಿದಂತೆ ವಾದಿಯ ದೃಢೋಕ್ತಿಗಳು ಸೃಷ್ಟಿಸಲಾದ ಹೇಳಿಕೆಯಾಗಿದೆ ಮತ್ತು ಆತನ ನಂಬಿಗಸ್ಥರೊಂದಿಗೆ ಶಾಮೀಲಾಗಿ ಪ್ರತಿವಾದಿ ಸಂಖ್ಯೆ-2 ಇವರು ಸೃಜಿಸಿರುವರು ಎಂಬುದನ್ನು ಅಲ್ಲಗಳೆಯಲಾಗಿದೆ. ದಾವಾ ಸ್ವತ್ತುಗಳು ಫಕೀರಪ್ಪ ಕುರಿ, ಆತನ ಇಬ್ಬರು ಗಂಡು ಮಕ್ಕಳಾದ ಲಾಲಪ್ಪ ಎಫ್. ಕುರಿ, ಯಲ್ಲಪ್ಪ ಎಫ್. ಕುರಿ ಈ ವಂಶಜರನ್ನು ಒಳಗೊಂಡ ಕುಟುಂಬದ ಸ್ವತ್ತುಗಳಾಗಿವೆ ಮತ್ತು ಸ್ವತ್ತಿನ ಮೂಲ ಒಡೆಯನಾದ ಫಕೀರಪ್ಪ ಕುರಿ ಇವರ ಮರಣಾ ನಂತರ, ಆತನ ಇಬ್ಬರು ಗಂಡು ಮಕ್ಕಳು 'ಎ' ಪಟ್ಟಿ ಮಾಡಲಾದ ಸ್ವತ್ತುಗಳನ್ನು, ಎಂದರೆ ಕೃಷಿ ಭೂಮಿಗಳನ್ನು, ಅಪ್ಪಸತಾ ವತನಿ ಪ್ರಕಾರ ಸಮಾನವಾಗಿ ಹಂಚಿಕೊಂಡಿದ್ದು, ಅದರಲ್ಲಿ ಲಾಲಪ್ಪ (ಮೊದಲ ಮಗ) ಅರ್ಧ ಪಾಲನ್ನು, ಎಂದರೆ 8 ಎಕರೆ 31 ಗುಂಟೆಗಳ ಜಮೀನು, ಎರಡು ಮನೆಗಳು ಮತ್ತು ಒಂದು ಹಿತ್ತಲನ್ನು ಹಾಗೂ ಆತನ ಎರಡನೇ ಮಗನಾದ ಯಲ್ಲಪ್ಪನು ಅರ್ಧ ಭಾಗವನ್ನು ಎಂದರೆ 8 ಎಕರೆ 32 ಗುಂಟೆಗಳ ಜಮೀನು, ಒಂದು ಮನೆ ಮತ್ತು ಒಂದು ಖಾಲಿ ನಿವೇಶನವನ್ನು ಕಳೆದ 28 ವರ್ಷಗಳಿಂದ ಅನುಭವಿಸುತ್ತಾ ಬಂದಿದ್ದು, ಸದರಿ ಲಾಲಪ್ಪ ಮತ್ತು ಯಲ್ಲಪ್ಪ ಇವರು ಅವರವರ ಪಾಲುಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಾ ಬಂದಿದ್ದಾರೆ ಎಂಬುದು ಪ್ರತಿವಾದಿಗಳ ನಿರ್ದಿಷ್ಟ ವಾದವಾಗಿದೆ. ಇದಲ್ಲದೆ, ಕಳೆದ 28 ವರ್ಷಗಳಿಂದ ಲಾಲಪ್ಪ ಮತ್ತು ಯಲ್ಲಪ್ಪ ಇಬ್ಬರೂ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆಂದು ಲಿಖಿತ ಹೇಳಿಕೆಯಲ್ಲಿ ಸ್ಥಿರೀಕರಿಸಲಾಗಿದೆ. ಲಾಲಪ್ಪನ ಮರಣಾ ನಂತರ, ವಾದಿಗಳು ಸ್ವತ್ತಿನ ಸ್ವಾಧೀನ ಪಡೆದುಕೊಂಡು, ಲಾಲಪ್ಪನಿಗೆ ಹಂಚಿಕೆ ಮಾಡಲಾದ ಅರ್ಧ ಪಾಲನ್ನು ಅನುಭವಿಸುತ್ತಿದ್ದಾರೆ. ಯಲ್ಲಪ್ಪ ಇವರ ವಿಧವಾ ಪತ್ನಿಯಾದ ಫಕೀರವ್ವ ಇವರ ಪಾಲಿಗೆ ಯಲ್ಲಪ್ಪ ಇವರ ಮರಣಾ ನಂತರ ಅವರ ಸ್ವತ್ತಿನ ಅರ್ಧ ಪಾಲು ಸ್ವಾಧೀನಕ್ಕೆ ಬಂದಿದೆ. ಅವರ ಮುಂದುವರಿದ ವಾದವೇನೆಂದರೆ, ಫಕೀರವ್ವ ಇವರ ಜೀವಿತಾವಧಿಯಲ್ಲಿ, ಪ್ರತಿವಾದಿ ಸಂಖ್ಯೆ-3 ಆದ ನೀಲಪ್ಪ ಕುರಿ ಇವರ ವಿವಾಹವನ್ನು

ಫಕೀರವ್ವಳ ಸಹೋದರನ ಮಗಳಾದ ಸತ್ಯವ್ವಳನ್ನು ಆತನ ಪತ್ನಿಯಾಗಿ ಪಡೆದು ನೆರವೇರಿಸಿರುವಳೆಂಬುದಾಗಿದೆ.

7. ವಾದಿ ಸಂಖ್ಯೆ–3 (ನೀಲಪ್ಪ) ಮೂವರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನನ್ನು ಹೊಂದಿದ್ದಾರೆ. ಮಗ ಮತ್ತಾರೂ ಅಲ್ಲದೆ ಪ್ರತಿವಾದಿ ಸಂಖ್ಯೆ–1 (ಮುತ್ತಣ್ಣ) ಈತನು ಅವರ ಮಗನಾಗಿದ್ದಾನೆ. ವಾದಿ ಸಂಖ್ಯೆ–3 ಇವರು ತನ್ನ ಪತ್ನಿ ಸತ್ಯವ್ವ ಹಾಗೂ ಫಕೀರವ್ವ (ಮರಣ ಶಾಸನಕರ್ತೆ) ಇವರಿಗೆ ಕಿರುಕುಳ ನೀಡಲು ಪ್ರಾರಂಭಿಸಿದ್ದರಿಂದ ಹಾಗೂ ದುಶ್ಚಟಗಳ ವ್ಯಸನಿಯಾದ್ದರಿಂದ ಮತ್ತು ಆತನು ತನ್ನ ಪತ್ನಿ ಸತ್ಯವ್ವ ಹಾಗೂ ಫಕೀರವ್ವ ಇವರೀರ್ವರಿಗೂ ಸಹ ಬಯ್ಯುತ್ತಿದ್ದುದರಿಂದ, ಮೃತ ಫಕೀರವ್ವ ಅವರು ತನ್ನ ಪಾಲನ್ನು ವಾದಿ ಸಂಖ್ಯೆ–3 ಮತ್ತು ವಾದಿ ಸಂಖ್ಯೆ–3 ಇವರ ಪತ್ನಿ ಸತ್ಯವ್ವ ಇವರ ಹೆಸರಿಗೆ ವರ್ಗಾಯಿಸಲು ನಿರಾಕರಿಸಿದರು ಹಾಗೂ ಪ್ರತಿವಾದಿ ಸಂಖ್ಯೆ–3 ಇವರನ್ನೂ ಒಳಗೊಂಡ ತನ್ನ ನಾಲ್ವರು ಮಕ್ಕಳೊಂದಿಗೆ ಮೃತ ಫಕೀರವ್ವ ಕುರಿ ಇವರ ಮನೆಯಲ್ಲಿ ವಾಸಿಸುತ್ತಿದ್ದರು ಮತ್ತು ಫಕೀರವ್ವ ಕುರಿ ಇವರೇ ಈ ನಾಲ್ವರು ಅಪ್ರಾಪ್ತ ಮಕ್ಕಳನ್ನು ಮತ್ತು ಸತ್ಯವ್ವ ಇವರನ್ನೂ ಸಹ ನೋಡಿಕೊಂಡರು. ಫಕೀರವ್ವ ಅವರು ಸತ್ಯವ್ವ ಮತ್ತು ಆಕೆಯ ಮಕ್ಕಳ ಪಾಲನೆಯನ್ನು ಸಹ ವಹಿಸಿಕೊಂಡರು. ಆದುದರಿಂದ, ಮೃತ ಫಕೀರವ್ವ ಕುರಿ ತನ್ನ ಪ್ರೀತಿ ಮತ್ತು ಮಮತೆಯಿಂದಾಗಿಯೇ ದಿನಾಂಕ: 15.03.2008ರಂದು ಪ್ರತಿವಾದಿ ಸಂಖ್ಯೆ–1 ಇವರ ಪರವಾಗಿ ಉಯಿಲನ್ನು ಬರೆದಿದ್ದು, ಅದನ್ನು ಉಪ–ನೋಂದಣಾಧಿಕಾರಿ, ಸವದತ್ತಿ ಇವರ ಕಚೇರಿಯಲ್ಲಿ ಸೂಕ್ತವಾಗಿ ನೋಂದಾಯಿಸಲಾಗಿದೆ ಎಂಬುದು ಪ್ರತಿವಾದಿಯ ವಾದವಾಗಿದೆ. ಮುಂದುವರಿದು, ಪ್ರತಿವಾದಿ ಸಂಖ್ಯೆ–1 ಇವರ ನಿಜವಾದ ತಾಯಿಯಾದ ಶ್ರೀಮತಿ ಸತ್ಯವ್ವ ಇವರು ನೀಡಿದ ಸಮ್ಮತಿಯ ಪ್ರಕಾರ, ಮೃತ ಫಕೀರವ್ವ ಇವರು ಫಕೀರಪ್ಪ ಜಗಲಿ ಇವರನ್ನು ಅಪ್ರಾಪ್ತ ಪ್ರತಿವಾದಿ ಸಂಖ್ಯೆ–1 ಇವರ ಪೋಷಕರನ್ನಾಗಿ ನೇಮಕ ಮಾಡಿದ್ದಾರೆಂದು ಲಿಖಿತ ಹೇಳಿಕೆಯಲ್ಲಿ ವಾದಿಸಲಾಗಿದೆ. ಸದರಿ ಫಕೀರಪ್ಪ

ಜಗಲಿ ಇವರು, ಪ್ರತಿವಾದಿ ಸಂಖ್ಯೆ-1 ಇವರ ವಿರುದ್ಧ ಯಾವುದೇ ಪ್ರತಿಕೂಲ ಹಿತಾಸಕ್ತಿಯನ್ನು ಹೊಂದಿರುವುದಿಲ್ಲ. ಇದಲ್ಲದೆ, ಉಯಿಲಿನಲ್ಲಿರುವ ಸ್ವತ್ತುಗಳನ್ನು, ಎಂದರೆ ಮೃತ ಫಕೀರವ್ವ ಅವರ ಸ್ವತ್ತುಗಳನ್ನು ಪೋಷಕರಾದ ಫಕೀರಪ್ಪ ಜಗಲಿ ಇವರ ಹೆಸರಿಗೆ ಬರೆಯಲಾಗಿದೆ ಎಂದು ವಾದಿಗಳು ತಿಳಿದುಕೊಂಡ ವಿಚಾರವು ತಪ್ಪು ಕಲ್ಪನೆಯಿಂದ ಕೂಡಿದ್ದು, ಅಪ್ರಾಪ್ತ ವಯಸ್ಕನಾದ ಪ್ರತಿವಾದಿ ಸಂಖ್ಯೆ-1 ಇವರ ಹೆಸರಿಗೆ ಬರೆದುಕೊಡಲಾಗಿದೆಯೇ ಹೊರತು ಫಕೀರಪ್ಪ ಜಗಲಿ ಇವರ ಹೆಸರಿಗೆ ಅಲ್ಲ, ಅವರು ಅಪ್ರಾಪ್ತನಾದ ಪ್ರತಿವಾದಿ ಸಂಖ್ಯೆ-1 ಇವರ ಪೋಷಕ ಮಾತ್ರನಾಗಿದ್ದರು ಎಂಬುದಾಗಿ ಪ್ರತಿವಾದಿಗಳು ಖಡಾಖಂಡಿತವಾಗಿ ವಾದಿಸಿದ್ದಾರೆ. ಸದರಿ ಫಕೀರಪ್ಪ ಜಗಲಿ ಇವರು ಮೃತ ಫಕೀರವ್ವ (ಮರಣ ಶಾಸನಕರ್ತೆ) ಇವರ ಸಹೋದರಿಯ ಮಗನಲ್ಲದೆ ಬೇರಾರು ಅಲ್ಲ ಎಂಬುದನ್ನು ಈ ಹಂತದಲ್ಲಿ ಗಮನಕ್ಕೆ ತೆಗೆದುಕೊಳ್ಳುವುದು ಅಗತ್ಯವಾಗಿದೆ.

8. ಸ್ವತ್ತುಗಳ ಮೇಲಿನ ವಾದಗಳನ್ನಾಧರಿಸಿದ, ವಿಚಾರಣಾ ನ್ಯಾಯಾಲಯವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ:

*i) ವಾದಿಗಳು ಒದಗಿಸಿದ ವಂಶವೃಕ್ಷವನ್ನು ಅವರು ಸಾಬೀತುಪಡಿಸಿದ್ದಾರೆಯೇ?*

*ii) ಮೊದಲನೇ ಪ್ರತಿವಾದಿಯೊಂದಿಗೆ, ವಾದಿಗಳು ದಾವೆ ನಿಗದಿತ ಸ್ವತ್ತಿನ ನಿರುಪಾಧಿಕ ಮಾಲೀಕರೆಂಬುದನ್ನು ಅವರು ಸಾಬೀತುಪಡಿಸಿರುವರೇ?*

*iii) ದಾವೆಯ ದಿನಾಂಕದಂದು ಇದ್ದಂತೆ ದಾವೆ ನಿಗದಿತ ಸ್ವತ್ತಿನ ಸ್ವಾಧೀನವನ್ನು ವಾದಿಗಳು ಹೊಂದಿದ್ದರೆಂಬುದನ್ನು ಅವರು ಸಾಬೀತುಪಡಿಸಿರುವರೇ?*

*iv) ದಾವೆ ನಿಗದಿತ ಸ್ವತ್ತಿನ ತಮ್ಮ ಸ್ವಾಧೀನ ಮತ್ತು ಅನುಭೋಗದಲ್ಲಿ ಎರಡನೇ ಪ್ರತಿವಾದಿಯು ಹಸ್ತಕ್ಷೇಪ ಮಾಡಿರುವರು ಎಂಬುದನ್ನು ವಾದಿಗಳು ಸಾಬೀತುಪಡಿಸಿರುವರೇ?*

*v) ಮೃತ ಫಕೀರವ್ವ ಕುರಿ ಅವರು ಬರೆದುಕೊಟ್ಟಿರುವರೆಂದು ಹೇಳಲಾದ ಉಯಿಲು ದಿನಾಂಕ: 15.03.2008ರದ್ದೇ ಎಂಬುದಾಗಿ ಪ್ರತಿವಾದಿಗಳು ಸಾಬೀತುಪಡಿಸಿರುವರೇ?*

*vi) ನ್ಯಾಯಾಲಯ ಶುಲ್ಕದ ಉದ್ದೇಶಕ್ಕಾಗಿ ಮೌಲ್ಯಮಾಪನ ಮಾಡಿದ ದಾವಾ ಸ್ವತ್ತು ಮತ್ತು ಅಧಿಕಾರ ವ್ಯಾಪ್ತಿ ಹಾಗೂ ಸಂದಾಯ ಮಾಡಿದ ನ್ಯಾಯಾಲಯ ಶುಲ್ಕವು ಸಮರ್ಪಕವಾಗಿರುವುದೇ?*

*vii) ವಾದಿಗಳು ದಾವೆಯಲ್ಲಿ ಕ್ಲೇಮು ಮಾಡಿರುವ ಪರಿಹಾರಕ್ಕೆ ಅವರು ಅರ್ಹರಿರುವರೇ?*

***ಹೆಚ್ಚುವರಿ ವಿವಾದಾಂಶಗಳು***

*1. ದಿನಾಂಕ: 15.03.2008ರ ಆರೋಪಿಸಲಾದ ಉಯಿಲು, ವಾದಪತ್ರದ ಕಂಡಿಕೆ ಸಂಖ್ಯೆ 6ರಲ್ಲಿ ಆರೋಪಿಸಿದಂತೆ ಎರಡನೇ ಪ್ರತಿವಾದಿಯು ಸೃಷ್ಟಿಸಿದ ಮತ್ತು ಸೃಜಿಸಿದ ದಸ್ತಾವೇಜೆಂದು ವಾದಿಗಳು ಸಾಬೀತುಪಡಿಸಿರುವರೇ?*

9. ವಾದಿ ಸಂಖ್ಯೆ–5 (ಬಸಪ್ಪ ಲಾಲಪ್ಪ ಕುರಿ) ಇವರನ್ನು ಅವರ ವಾದಕ್ಕೆ ಬೆಂಬಲವಾಗಿ ಪಿಡಬ್ಲ್ಯು–1 ಎಂದು ವಿಚಾರಣೆ ಮಾಡಿ ಹಾಜರುಪಡಿಸಲಾಗಿದೆ

ಮತ್ತು ನಿಶಾನೆ ಪಿ-1ರಿಂದ ಪಿ-23 ಎಂದು ಗುರುತಿಸಲಾಗಿದೆ. ಪ್ರತಿವಾದಿಗಳ ಪರವಾಗಿ, ಮೊದಲನೇ ಪ್ರತಿವಾದಿಯ ತಾಯಿಯನ್ನು ಡಿಡಬ್ಲ್ಯು.1 ಎಂದು ಹಾಗೂ ಉಯಿಲಿನ ದೃಢೀಕರಿಸುವ ಸಾಕ್ಷಿದಾರನನ್ನು ಡಿಡಬ್ಲ್ಯು.3 ಎಂದು ವಿಚಾರಣೆ ಮಾಡಲಾಗಿದೆ ಮತ್ತು ಸುಸಂಗತ ಸಮಯದಲ್ಲಿ ಉಪ-ನೋಂದಣಾಧಿಕಾರಿಯ ಕಚೇರಿಯ ಪ್ರಭಾರಿಯಾಗಿದ್ದ ಅಧಿಕಾರಿಯನ್ನು ಡಿಡಬ್ಲ್ಯು.3 ಎಂದು ವಿಚಾರಣೆ ಮಾಡಲಾಗಿದೆ. ಹನುಮಂತಪ್ಪ ಲಕ್ಷ್ಮಣ್ ಲಂಗೋಟಿ ಎಂಬ ಹೆಸರಿನ ಇನ್ನೊಬ್ಬ ಸಾಕ್ಷಿದಾರನನ್ನು, ಮೃತ ಫಕೀರವ್ವ ಇವರಿಗೆ ಸೇರಿದ ಜಮೀನಿನ ಸಾಗುವಳಿ ಮಾಡುತ್ತಿದ್ದರೆಂದು ತೋರಿಸಲು ಡಿಡಬ್ಲ್ಯು.4 ಎಂದು ವಿಚಾರಣೆ ಮಾಡಲಾಗಿದೆ. ನಿಶಾನೆ ಡಿ.1ರಿಂದ ಡಿ.11 ಇವರನ್ನು ಅವರವರ ಸಾಕ್ಷ್ಯದಲ್ಲಿ ಗುರುತಿಸಲಾಗಿದೆ.

10. ಮೌಖಿಕವಾಗಿ ಮತ್ತು ದಸ್ತಾವೇಜೀಯವಾಗಿ, ಎರಡೂ ರೀತಿಯಲ್ಲಿ, ದಾಖಲೆಯಲ್ಲಿರುವ ಸಾಕ್ಷ್ಯದ ಗುಣಾರ್ಹತೆಗಳ ಆಧಾರದ ಮೇಲೆ, ವಿಚಾರಣಾ ನ್ಯಾಯಾಲಯವು, ವಾದಿಗಳು ದಾವೆ ನಿಗದಿ ಮಾಡಿದ ಸ್ವತ್ತುಗಳ ನಿರುಪಾಧಿಕ ಮಾಲೀಕರೆಂಬುದನ್ನು ಮತ್ತು ಅದರ ಅನನ್ಯ ಸ್ವಾಧೀನವನ್ನು ಸಾಬೀತುಪಡಿಸಲು ಅವರು ವಿಫಲರಾಗಿದ್ದಾರೆ ಎಂದು ತೀರ್ಮಾನಿಸಿದೆ. ಅಲ್ಲದೆ, ನ್ಯಾಯಾಲಯವು, ಮೃತ ಫಕೀರವ್ವ ಕುರಿ ಇವರು ಪ್ರತಿವಾದಿ ಸಂಖ್ಯೆ-1 ಆಗಿರುವ ಮುತ್ತಣ್ಣನ ಹೆಸರಿಗೆ ದಿನಾಂಕ: 15.03.2008ರ ಉಯಿಲನ್ನು ಯುಕ್ತವಾಗಿ ಬರೆದುಕೊಟ್ಟಿರುವುದನ್ನು ಪ್ರತಿವಾದಿಗಳು ಯಶಸ್ವಿಯಾಗಿ ಸಾಬೀತು ಪಡಿಸಿದ್ದಾರೆಂದು ತೀರ್ಮಾನಿಸಿದೆ. ಹೆಚ್ಚು ಪ್ರಾಸಂಗಿಕವಾಗಿಲ್ಲದ ಮತ್ತು ಯಾವುವೇ ವಾದಗಳನ್ನು ಮಂಡಿಸದ ಇತರ ವಿವಾದಾಂಶಗಳನ್ನು ಮೇಲಿನ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ವ್ಯವಹರಿಸಬೇಕಾದ ಅವಶ್ಯಕತೆಯಿಲ್ಲ. ಆದ್ದರಿಂದ, ಅವುಗಳನ್ನು ಕುರಿತು ವಿವರವಾಗಿ ವ್ಯವಹರಿಸಿರುವುದಿಲ್ಲ.

11. ಅಪೀಲುದಾರರು-ವಾದಿಗಳ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಎಮ್. ಜಿ. ನಾಗನೂರಿ ಅವರು, ಕಾನೂನಿನಲ್ಲಿ ಉದ್ದೇಶಿಸಲಾದಂತೆ, ಉಯಿಲನ್ನು ಯುಕ್ತವಾಗಿ ಬರೆದುಕೊಟ್ಟ ಮತ್ತು ಅದನ್ನು ದೃಢೀಕರಿಸಿದ ಕುರಿತು ಸಾಬೀತುಪಡಿಸುವ ಹೊಣೆಗಾರಿಕೆಯು ಪ್ರತಿವಾದಿಯದ್ದೆಂದು ವಾದಿಸಿದ್ದಾರೆ. ಅವರು ನಮ್ಮನ್ನು ಡಿಡಬ್ಲ್ಯು.2,

ದೃಢೀಕರಣ ಸಾಕ್ಷಿ ಅವರ ಸಾಕ್ಷ್ಯದೆಡೆಗೆ ಒಯ್ದು, ಸದರಿ ಸಾಕ್ಷಿಯು, ಉಪ–ನೋಂದಣಾಧಿಕಾರಿಯ ಮುಂದೆ ಉಯಿಲಿಗೆ ಹೆಬ್ಬೆರಳಿನ ಗುರುತು ಹಾಕುವುದನ್ನು ತಾನು ನೋಡಿರುವನೆಂಬ ಅಂಶದ ಬಗ್ಗೆ ಆಗಲಿ ಅಥವಾ ಉಯಿಲಿನ ಮೇಲೆ ಆಕೆಯ ಹೆಬ್ಬೆರಳಿನ ಗುರುತನ್ನು ಸೂಕ್ತವಾಗಿ ಹಾಕುವ ಸಂಬಂಧದಲ್ಲಿ ಆಕೆಯಿಂದ ಸ್ವೀಕೃತಿಯನ್ನು ಪಡೆದ ಬಗ್ಗೆ ಆಗಲಿ ಮಾತನಾಡಿರುವುದಿಲ್ಲ ಎಂದು ವಾದಿಸಿದ್ದಾರೆ. ಇದು, ಸದರಿ ಉಯಿಲು ಸೃಷ್ಟಿಸಲಾದುದೆಂಬುದನ್ನು ಸ್ವತಃ ಸೂಚಿಸುತ್ತದೆ ಎಂದು ಅವರು ಒತ್ತಿ ಹೇಳಿದ್ದಾರೆ.

12. ಮರಣ ಶಾಸನಕರ್ತೆಯಾದ ಮೃತ ಫಕೀರವ್ವ ಅವರು ಅನಕ್ಷರಸ್ಥೆ/ಗ್ರಾಮೀಣ ಮಹಿಳೆಯಾಗಿದ್ದರು ಮತ್ತು ಇದು, ಆಕೆಯ ಸಮ್ಮುಖದಲ್ಲಿ ಬರೆದಿದ್ದ, ಆಕೆಯ ಸ್ವಂತ ಉಯಿಲು ಎಂದು ತೋರಿಸಲು ಅಥವಾ ಆಕೆ ಅದರ ಒಳಾಂಶಗಳನ್ನು ಅರ್ಥಮಾಡಿಕೊಂಡಿದ್ದಳು ಎಂದು ತೋರಿಸಲು ಏನೂ ಇಲ್ಲ; ಉಯಿಲಿನ ಒಳಾಂಶಗಳನ್ನು ಉಪ–ನೋಂದಣಾಧಿಕಾರಿಯು ನೋಂದಾಯಿಸಿದ ಸಮಯದಲ್ಲಿ ಆಕೆಗೆ ಉಯಿಲಿನ ಒಳಾಂಶಗಳನ್ನು ಕುರಿತು ವಿವರಿಸಲಾಗಿತ್ತು ಎಂದು ತೋರಿಸಲು ಏನೂ ಇಲ್ಲ ಎಂಬುದು ಅವರ ಮುಂದಿನ ವಾದವಾಗಿದೆ. ಈ ಸಂಬಂಧದಲ್ಲಿ, ಉಯಿಲನ್ನು ಬರೆದುಕೊಡುವ ವ್ಯಕ್ತಿಯು ದಸ್ತಾವೇಜನ್ನು ಓದಲು ಅಸಮರ್ಥನಾ/ಳಾಗಿದ್ದ ಸಂದರ್ಭದಲ್ಲಿ, ಅದನ್ನು ಆತನಿಗೆ/ಆಕೆಗೆ ಓದಿ ಹೇಳತಕ್ಕದ್ದು ಮತ್ತು ಅವಶ್ಯವಿದ್ದಲ್ಲಿ ವಿವರಿಸತಕ್ಕದ್ದು ಎಂಬುದನ್ನು ನಿಯಮಗಳು ಅಗತ್ಯಪಡಿಸುತ್ತವೆ ಎಂದು ವಾದಿಸಲು ಅವರು, ಕರ್ನಾಟಕ ನೋಂದಣಿ ನಿಯಮಗಳು, 1965ರ ನಿಯಮ 73ರ ಕಡೆಗೆ ನಮ್ಮ ಗಮನ ಸೆಳೆಯುತ್ತಾರೆ. ನಿಯಮ–73ರ ಅಡಿಯಲ್ಲಿ ಕರ್ತವ್ಯವನ್ನು ವಿಧಿಸಿರುವುದರಿಂದ ಮತ್ತು ಸಾಕ್ಷಿ ಡಿಡಬ್ಲ್ಯು.3 ಇವರ ಮುಖ್ಯ ವಿಚಾರಣೆಯಲ್ಲಿ, ಉಯಿಲಿನ ಒಳಾಂಶಗಳನ್ನು ಓದಿ ಹೇಳಲಾದ ಮತ್ತು ಉಯಿಲುದಾರಳಿಗೆ ವಿವರಿಸಿಲ್ಲದಿರುವುದಕ್ಕೆ ಸಂಬಂಧಿಸಿದಂತೆ ಏನನ್ನೂ ಹೇಳಿಲ್ಲದಿರುವುದರಿಂದ, ಉಯಿಲನ್ನು ಕಾನೂನಿಗೆ ಅನುಸಾರವಾಗಿ ನೋಂದಾಯಿಸಿಲ್ಲವೆಂದು ಮತ್ತು ಅದು ಸಾಬೀತಾಗಿರುವುದಿಲ್ಲವೆಂದು ಮತ್ತು

ಯುಕ್ತವಾಗಿ ಬರೆದಿಲ್ಲವೆಂದು ಪರಿಗಣಿಸಬೇಕಾಗಿ ಅವರು ಒತ್ತಾಯಿಸಿದ್ದಾರೆ. ಈ ಸಂಬಂಧವಾಗಿ, ***ಶಿವಾಜಿ ರಾವ್ ಎಮ್.ವಿ. -ವಿರುದ್ಧ- ಕೆ.ಎಸ್. ನಾರಾಯಣ ರಾವ್ ಮತ್ತು ಇತರರು*** [1] ಮೊಕದ್ದಮೆಯಲ್ಲಿ ದಿನಾಂಕ: 27ನೇ ಅಕ್ಟೋಬರ್, 1978ರಂದು ವಿಲೇ ಮಾಡಿದ ಎಮ್ಎಫ್ಎ ಸಂಖ್ಯೆ: 907 ಮತ್ತು 975/1977ರಲ್ಲಿ, ಈ ನ್ಯಾಯಾಲಯದ ತೀರ್ಪಿನ ಮೇಲೆ ಅವರು ಅವಲಂಬಿತರಾಗಿದ್ದಾರೆ.

13. ನಿಶಾನೆ ಡಿ.1ರ ಪ್ರಕಾರ ಬರೆದ ಉಯಿಲನ್ನು ವಾಸ್ತವವಾಗಿ ಪ್ರತಿವಾದಿ ಸಂಖ್ಯೆ-2 ಇವರ ಹೆಸರಿಗೆ ಬರೆಯಲಾಗಿದೆಯೇ ಹೊರತು, ಪ್ರತಿವಾದಿ ಸಂಖ್ಯೆ-1 ಆದ ಮುತ್ತಣ್ಣನ ಹೆಸರಿಗೆ ಅಲ್ಲ ಮತ್ತು ಅದರಿಂದಾಗಿ ಉಯಿಲಿನ ಪ್ರತಿಪಾದಕನು ಒತ್ತಾಯಿಸಿದಂತೆ, ಉಯಿಲನ್ನು ನಿಸ್ಸಂಶಯವಾಗಿ ಕೊನೆಯ ಉಯಿಲು ಮತ್ತು ಪ್ರತಿವಾದಿ ಸಂಖ್ಯೆ-1 ಇವರ ಹೆಸರಿಗೆ ಸ್ವತ್ತುಗಳನ್ನು ಬರೆದುಕೊಡುವ ಮರಣಶಾಸನಕರ್ತೆಯ ನಿಶ್ಚಿತ ಉದ್ದೇಶವನ್ನು ವ್ಯಕ್ತಪಡಿಸುವ ಮರಣಶಾಸನ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂಬುದು ಅವರ ಮುಂದಿನ ವಾದವಾಗಿದೆ. ಅಪ್ರಾಪ್ತ ವಯಸ್ಕನಾದ ಪ್ರತಿವಾದಿ ಸಂಖ್ಯೆ-1 ಈತನ ತಾಯಿಯಾದ ಸತ್ಯವ್ವ ಜೀವಂತವಿದ್ದಾಗ, ಪ್ರತಿವಾದಿ ಸಂಖ್ಯೆ-2 ಇವರನ್ನು ಆತನ ಪೋಷಕನನ್ನಾಗಿ ನೇಮಕ ಮಾಡಲು ಮರಣಶಾಸನಕರ್ತೆಗೆ ಯಾವುದೇ ಕಾರಣ ಇರಲಿಲ್ಲವೆಂಬುದನ್ನು ಸಹ ಗಮನಿಸಬೇಕೆಂದು ಕೋರಲಾಗಿದೆ.

14. ಮೃತ ಫಕೀರವ್ವ ಅವರ ಮನಸ್ಸಿನ ಸ್ವಸ್ಥ ತೀರ್ಮಾನಿಸಬಹುದಾದ ಸ್ಥಿತಿಗೆ ಸಂಬಂಧಿಸಿದಂತೆ, ಮಾನ್ಯ ನ್ಯಾಯವಾದಿ ಶ್ರೀ ಎಮ್. ಜಿ. ನಾಗನೂರಿ ಇವರು, ಮರಣಶಾಸನಕರ್ತೆಯನ್ನು ದಿನಾಂಕ: 21.03.2008ರಂದು ಆಸ್ಪತ್ರೆಗೆ ಸೇರಿಸಲಾಗಿತ್ತು ಮತ್ತು ಅವರು ದಿನಾಂಕ: 27.03.2008ರಂದು ಮರಣ ಹೊಂದಿದರು ಎಂಬುದನ್ನು ಪ್ರತಿಪಾದಿಸಲು ಸವದತ್ತಿಯಲ್ಲಿನ ಆಸ್ಪತ್ರೆಯ ವೈದ್ಯರು ನೀಡಿದ

1. ಐಎಲ್ಆರ್ 1979 ಸಂಪುಟ 1 ಸಂಕ್ಷಿಪ್ತ ಟಿಪ್ಪಣಿ ಬಾಬು 10 ಪುಟ-229

ವೈದ್ಯಕೀಯ ಪ್ರಮಾಣಪತ್ರವಾದ ನಿಶಾನೆ ಪಿ-17ರ ಕಡೆಗೆ ನ್ಯಾಯಾಲಯದ ಗಮನ ಸೆಳೆದಿದ್ದಾರೆ. ಆದರೆ, ಉಯಿಲನ್ನು ದಿನಾಂಕ: 15.03.2008ರಂದು ಬರೆಯಲಾಗಿದೆ. ಆದುದರಿಂದ, ಉಯಿಲನ್ನು ಬರೆದಿರುವ ವಿಷಯವು ರಹಸ್ಯದಿಂದ ಕೂಡಿದೆ ಮತ್ತು ಅದು ಸಂಶಯಾತ್ಮಕ ಸಂದರ್ಭಗಳಿಂದ ಕೂಡಿದೆ ಎಂದು ಅವರು ವಾದಿಸಿದ್ದಾರೆ.

15. ನಿಶಾನೆ ಡಿ-1 ಉಯಿಲಿನ ಒಳಾಂಶಗಳು, ದಾವೆ ನಿಗದಿ ಮಾಡಿದ ಸ್ವತ್ತುಗಳ ಪೈಕಿ ಫಕೀರವ್ವ ಅವರ ಅವಿಭಜಿತ ಅರ್ಧ ಪಾಲನ್ನು ಪ್ರತಿವಾದಿ ಸಂಖ್ಯೆ-1 ಇವರ ಹೆಸರಿಗೆ ಬರೆದುಕೊಟ್ಟಿದ್ದಾರೆ ಎಂಬುದನ್ನು ಬಹಿರಂಗಪಡಿಸುತ್ತವೆ ಮತ್ತು ಅದು ಹಾಗಿದ್ದಲ್ಲಿ, ವಾದಿಗಳು ದಾವೆ ನಿಗದಿ ಮಾಡಿದ ಸ್ವತ್ತುಗಳ ಮೇಲೆ ನಿರುಪಾಧಿಕ ಹಕ್ಕನ್ನು ಸಾಬೀತುಪಡಿಸಲು ವಿಫಲರಾಗಿರುವರೆಂದು ಭಾವಿಸಿದಾಗ್ಯೂ, ಆ ಸ್ವತ್ತುಗಳು ಅವಿಭಕ್ತ ಕುಟುಂಬದ ಸ್ವತ್ತುಗಳಾಗಿರುವಷ್ಟರಮಟ್ಟಿಗೆ, ಉಳಿದ ಅರ್ಧ ಪಾಲಿನಲ್ಲಿನ ಭಾಗಕ್ಕೆ ಮತ್ತು ಪ್ರತ್ಯೇಕ ಸ್ವಾಧೀನಕ್ಕೆ ಅವರು ಹಕ್ಕುಳ್ಳವರಾಗಿದ್ದಾರೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ ಮತ್ತು ಅದರಿಂದಾಗಿ, ಅವಿಭಕ್ತ ಕುಟುಂಬ ಸ್ವತ್ತುಗಳಲ್ಲಿನ ಅರ್ಧ ಪಾಲನ್ನು, ಪಾಲು ಮಾಡಿಕೊಳ್ಳಲು ಮತ್ತು ಪ್ರತ್ಯೇಕ ಸ್ವಾಧೀನ ಹೊಂದಲು ನಿರ್ದೇಶಿಸಿ ಈ ನ್ಯಾಯಾಲಯವು ಡಿಕ್ರಿ ಮಾಡಬಹುದಾಗಿದೆ ಎಂಬುದು ಅವರ ಕೊನೆಯ ವಾದವಾಗಿದೆ, ಹಾಗೂ ಇದರಿಂದಾಗಿ, ವಾದಿಗಳ-ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಪರ್ಯಾಯವಾಗಿ, ***ನೀಲವ್ವ -ವಿರುದ್ಧ- ಶಿವವ್ವ***[2] ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಅರ್ಥ ವಿವರಿಸಿದಂತೆ ಮತ್ತು ಅರ್ಥೈಸಿದಂತೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ-VII ನಿಯಮ-7ರ ಪ್ರಕಾರ ಇದೆ ಎಂಬುದಾಗಿ ವಾದಿಸಿರುವರು.

---

2. ಐಎಲ್‌ಆರ್ 1988 ಕೆಎಆರ್-2761

16. ಕುಟುಂಬದಲ್ಲಿ ಅಪ್ಸಾತ್ ವತನಿ ಇತ್ತೆಂದು ಮತ್ತು ಸ್ವತ್ತುಗಳನ್ನು ಲಾಲಪ್ಪ ಮತ್ತು ಯಲ್ಲಪ್ಪ ಇವರು ಪ್ರತ್ಯೇಕವಾಗಿ ಅನುಭವಿಸುತ್ತಿದ್ದರೆಂದು, ಉಯಿಲಿನ ಒಳಾಂಶಗಳು ದಾವಾ ಸ್ವತ್ತುಗಳಲ್ಲಿ ಮರಣಶಾಸನಕರ್ತೆಯು ಅವಿಭಜಿತ ಅರ್ಧ ಪಾಲನ್ನು ಮುತ್ತಣ್ಣನ ಹೆಸರಿನಲ್ಲೇ ಆಕೆ ಉಯಿಲು ಮಾಡಿಕೊಟ್ಟಿದ್ದಳೆಂದು ಪ್ರತಿವಾದಿಗಳು ವಾದವನ್ನು ಕೈಗೆತ್ತಿಕೊಂಡಿರುವಷ್ಟರಮಟ್ಟಿಗೆ ನಿಶಾನೆ–ಡಿ1ರ ಒಳಾಂಶಗಳಿಗೆ ಹೋಲಿಸಿದಂತೆ ವಾದಗಳಲ್ಲಿ ವ್ಯತ್ಯಾಸವಿದೆ ಎಂಬುದು ಶ್ರೀ ಎಮ್. ಜಿ. ನಾಗನೂರಿ ಇವರ ಕೊನೆಯ ವಾದವಾಗಿದೆ.

17. ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು, ವಿಚಾರಣಾ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳನ್ನು ಬೆಂಬಲಿಸಿ, ದೃಢೀಕರಿಸುವ ಸಾಕ್ಷಿಯನ್ನು ಪರೀಕ್ಷಿಸುವ/ವಿಚಾರಿಸುವ ಮೂಲಕ, ಉಯಿಲು ಕಡ್ಡಾಯವಾಗಿ ನೋಂದಣಿ ಮಾಡಬಹುದಾದ ದಸ್ತಾವೇಜೆಂದು ಸಾಬೀತುಪಡಿಸಬೇಕಾದ ಅಗತ್ಯವಿಲ್ಲವೆಂದು, ದೃಢೀಕರಿಸುವ ಸಾಕ್ಷಿಯನ್ನು ವಿಚಾರಿಸುವ ಮೂಲಕ, ಉಯಿಲನ್ನು ಸೂಕ್ತವಾಗಿ ಸಾಬೀತುಪಡಿಸಲಾಗಿದೆ ಎಂದು ಹಾಗೂ ನೋಂದಣಿ ಪ್ರಾಧಿಕಾರದ ಕಡೆಯಿಂದ ಯಾವುದೇ ಪ್ರಕ್ರಿಯಾ ದೋಷ ಉಂಟಾಗಿದ್ದರೆ, ಆ ಕಾರಣದ ಮೇಲೆ ಉಯಿಲನ್ನು ಸಾಬೀತಾಗಿಲ್ಲವೆಂದು ನಿರ್ಣಯಿಸಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ. ನೋಂದಣಿ ಸಮಯದಲ್ಲಿ ಉಪ–ನೋಂದಣಾಧಿಕಾರಿಯು ನೀಡಿದ ಹಿಂಬರಹವು, ನೋಂದಣಿ ವಿಷಯಗಳಿಗೆ ಮಾತ್ರ ಸಂಬಂಧಿಸಿದ್ದು, ಉಯಿಲಿನ ಸಾಕ್ಷ್ಯಕ್ಕೆ ಯಾವುದೇ ರೀತಿಯಲ್ಲೂ ಸಂಬಂಧಿಸಿರುವುದಿಲ್ಲವೆಂದು ವಾದಿಸಲು ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ***ಭಗತ್ ರಾಮ್ ಮತ್ತು ಮತ್ತೊಬ್ಬರು -ವಿರುದ್ಧ- ಸುರೇಶ್ ಮತ್ತು ಇತರರು***[3]**,** ಮೊಕದ್ದಮೆಯಲ್ಲಿನ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ.

18. ಭಾರತ ಉತ್ತರಾಧಿಕಾರ ಅಧಿನಿಯಮದ 63ನೇ ಪ್ರಕರಣದೊಂದಿಗೆ ಓದಲಾದ ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ

3. ಎಐಆರ್ 2004 ಎಸ್‌ಸಿ 436

ಉಯಿಲನ್ನು ಸಾಬೀತುಪಡಿಸಬೇಕೆಂದು ವಾದಿಸಲಾಗಿದೆ. ಅಲ್ಲದೆ, ಎರಡನೇ ಪ್ರತಿವಾದಿಯನ್ನು ಪ್ರತಿವಾದಿ ಸಂಖ್ಯೆ-1 ಆದ ಅಪ್ರಾಪ್ತ ವಯಸ್ಕ ಮುತ್ತಣ್ಣನ ಪೋಷಕನನ್ನಾಗಿ ನೇಮಕ ಮಾಡುವ ಮೂಲಕ, ಪ್ರಸ್ತುತ ಸಂದರ್ಭದಲ್ಲಿ ಆತನ ಹೆಸರಿಗೆ ಉಯಿಲು ಮಾಡಲಾಗಿದೆ ಎಂದು ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ. ಪ್ರತಿವಾದಿ ಸಂಖ್ಯೆ-1 ಈತನ ವಿರುದ್ಧ ಪ್ರತಿವಾದಿ ಸಂಖ್ಯೆ-2 ಇವರ ಹಿತಾಸಕ್ತಿಯಲ್ಲಿ ಯಾವುದೇ ಪ್ರತಿಕೂಲತೆ ಇಲ್ಲವೆಂಬುದರ ಕಡೆಗೆ ಗಮನ ಸೆಳೆಯಲಾಗಿದೆ ಮತ್ತು ಮೊದಲನೇ ಪ್ರತಿವಾದಿಯ ಹಿತಾಸಕ್ತಿಯ ವಿರುದ್ಧ ಅಂಥ ಯಾವುದೇ ಹಿತಾಸಕ್ತಿಯನ್ನು ಕ್ಲೇಮು ಮಾಡಿ ಅಥವಾ ಮಾಡಿಕೊಟ್ಟಿರುವ ಉಯಿಲು ಪ್ರತಿವಾದಿ ಸಂಖ್ಯೆ-1 ಈತನ ಹೆಸರಿನಲ್ಲಿಲ್ಲವೆಂದು, ಆದರೆ ತನ್ನ ಹೆಸರಿನಲ್ಲಿದೆಯೆಂದು ವಾದಿಸಿ ಯಾವುದೇ ಲಿಖಿತ ಹೇಳಿಕೆಯನ್ನು ಸಹ ಅವರು ಸಲ್ಲಿಸಿರುವುದಿಲ್ಲ.

19. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿರುವ ವಿವಿಧ ವಾದಗಳ ಮತ್ತು ದಾಖಲೆಯಲ್ಲಿರುವ ವಿಷಯಾಂಶಗಳ ಆಧಾರದ ಮೇಲೆ, ನಮ್ಮ ಪರ್ಯಾಲೋಚನೆಗೆ ಉದ್ಭವಿಸಿದ ಅಂಶಗಳು ಈ ಮುಂದಿನಂತಿವೆ:

(i) ದಾವಾ ನಿಗದಿತ ಸ್ವತ್ತುಗಳ ತಮ್ಮ ನಿರುಪಾಧಿಕ ಮಾಲಿಕತ್ವವನ್ನು ಸಾಬೀತುಪಡಿಸಲು ವಾದಿಗಳು ವಿಫಲರಾಗಿದ್ದಾರೆಂದು ಮತ್ತು ಪ್ರತಿವಾದಿ ಸಂಖ್ಯೆ-1 ಈತನ ಹೆಸರಿಗೆ ಫಕೀರವ್ವ ಕುರಿ ಇವರು ತಾನು ಮಾಲೀಕತ್ವ ಹೊಂದಿದ ಸ್ವತ್ತುಗಳನ್ನು ಉಯಿಲು ಮಾಡುವ ಮೂಲಕ, ಉಯಿಲನ್ನು ಆಕೆ ಯುಕ್ತವಾಗಿ ಬರೆದಿರುವುದನ್ನು ಪ್ರತಿವಾದಿಗಳು ಯಶಸ್ವಿಯಾಗಿ ಸಾಬೀತು ಪಡಿಸಿರುವರೆಂದು ನಿರ್ಣಯಗಳನ್ನು ದಾಖಲಿಸುವಲ್ಲಿ ಕೆಳಗಿನ ನ್ಯಾಯಾಲಯವು ಯಾವುದೇ ಅಕ್ರಮತೆಯನ್ನು ಎಸಗಿದ್ದಾರೆಯೇ?

(ii) ಆದೇಶವೇನು?

20. ಎರಡೂ ಅಂಶಗಳು ಪರಸ್ಪರ ಸಂಬಂಧಿಸಿರುವುದರಿಂದ, 1ನೇ ಮತ್ತು 2ನೇ ಅಂಶಗಳನ್ನು ಒಟ್ಟಾಗಿ ಪರ್ಯಾಲೋಚನೆಗೆ ಕೈಗೆತ್ತಿಕೊಳ್ಳಲಾಗಿದೆ:

21. ವಂಶಾವಳಿ ಬಗ್ಗೆ ಯಾವುದೇ ವಿವಾದ ಇಲ್ಲದಿರುವುದರಿಂದ, ಯಲ್ಲಪ್ಪ ಇವರ ಸಂಪತ್ತಿಗೆ ಮೃತ ಯಲ್ಲಪ್ಪ ಇವರ ಪತ್ನಿಯಾಗಿ ಫಕೀರವ್ವ ಇವರು ಉತ್ತರಾಧಿಕಾರಿಯಾಗುತ್ತಾರೆಂದು ಮತ್ತು ಅವರು ಮಕ್ಕಳನ್ನು ಹೊಂದಿಲ್ಲದಿರುವುದರಿಂದ, ದಾವಾದ ಸ್ವತ್ತುಗಳಲ್ಲಿ ಯಲ್ಲಪ್ಪ ಇವರ ಪಾಲಿಗೆ ನಿರುಪಾಧಿಕವಾಗಿ ಹಕ್ಕುಳ್ಳವರಾಗುತ್ತಾರೆ ಎಂದು ಇಲ್ಲಿ ನಾವು ಮರುಪರಿಗಣಿಸಿದರಷ್ಟೇ ಸಾಕು. ದಾಖಲೆಯಲ್ಲಿನ ಸಾಕ್ಷ್ಯದಿಂದ ಮತ್ತು ಫಕೀರವ್ವ ಅವರು ಪ್ರತ್ಯೇಕವಾಗಿ ವಾಸಿಸುತ್ತಿದ್ದರೆಂಬ ವಾದಪತ್ರದ ದೃಢೋಕ್ತಿಗಳಿಂದಲೂ ಸಹ ಇದು ಕಂಡುಬರುತ್ತದೆ; ಆಕೆಯ ಪತಿಯು ಬಿಟ್ಟುಹೋದ ಸ್ವತ್ತುಗಳನ್ನು ಆಕೆ ಅನುಭವಿಸುತ್ತಿದ್ದಳು ಮತ್ತು ವಾದಿ ಸಂಖ್ಯೆ-3 ಆದ ನೀಲಪ್ಪ, ಅವರ ಪತ್ನಿ ಸತ್ಯವ್ವ ಮತ್ತು ಉಯಿಲಿನ ಫಲಾನುಭವಿ ಮುತ್ತಣ್ಣ ಇವರು ಆಕೆಯೊಂದಿಗೆ ವಾಸಿಸುತ್ತಿದ್ದರು. ನೀಲಪ್ಪನು ವ್ಯಸನಕ್ಕೀಡಾಗಿದ್ದನು ಮತ್ತು ಆತನು ಸತ್ಯವ್ವ ಮತ್ತು ಫಕೀರವ್ವ ಇವರನ್ನು ಹಿಂಸಿಸುತ್ತಿದ್ದನು ಮತ್ತು ಅದರಿಂದಾಗಿ ಫಕೀರವ್ವ ಪ್ರತಿವಾದಿ ಸಂಖ್ಯೆ-1 ಆದ ಮುತ್ತಣ್ಣನ ಮೇಲಿದ್ದ ಪ್ರೀತಿ ಮತ್ತು ಮಮತೆಯ ಕಾರಣದಿಂದ ಆತನ ಹಿತಾಸಕ್ತಿಯನ್ನು ಕಾಪಾಡಲು ನಿರ್ಧರಿಸಿದ್ದರು ಮತ್ತು ಆತನ ತಾಯಿಯು ದಿನಾಂಕ: 15.03.2008ರಂದು ಉಯಿಲನ್ನು ಬರೆದಿದ್ದರು.

22. ಉಯಿಲನ್ನು ನಿಶಾನೆ-ಡಿ1 ಎಂದು ಹಾಜರುಪಡಿಸಲಾಗಿದೆ ಮತ್ತು ಗುರುತಿಸಲಾಗಿದೆ. ಸತ್ಯವ್ವ ಬೇರಾರೂ ಅಲ್ಲದೆ ಮರಣ ಶಾಸನಕರ್ತೆಯಾದ ಫಕೀರವ್ವಳ ಸೋದರ ಸೊಸೆಯಾಗಿದ್ದು (ಸಹೋದರನ ಮಗಳು), ಅಷ್ಟರಮಟ್ಟಿಗೆ ಈ ಉಯಿಲನ್ನು ಮಾಡಿರುವಲ್ಲಿ ಅಸಹಜವಾದುದೇನೂ ಇರುವುದಿಲ್ಲ. ನಿಶಾನೆ-ಡಿ1 ಸಹ, ಮುತ್ತಣ್ಣನ

ಮೇಲಿನ ಪ್ರೀತಿ ಮತ್ತು ಮಮತೆಯಿಂದಾಗಿ ಮತ್ತು ಆಕೆಯ ಜೊತೆಗೆ ಮುತ್ತಣ್ಣ ಮತ್ತು ಸತ್ಯವ್ವ ವಾಸಿಸುತ್ತಿದ್ದುದರಿಂದಾಗಿ ಹಾಗೂ ಭವಿಷ್ಯದಲ್ಲಿ ಆಕೆಯನ್ನು ಅವರು ನೋಡಿಕೊಳ್ಳುತ್ತಾರೆ ಎಂಬ ಬಲವಾದ ಆಶಯದಿಂದ, ಆಕೆಯು ಮುತ್ತಣ್ಣನ ಹೆಸರಿಗೆ ಸ್ವತ್ತುಗಳನ್ನು ಉಯಿಲು ಮಾಡಿಕೊಟ್ಟಿದ್ದಾರೆ. ಆದಾಗ್ಯೂ, ಸತ್ಯವ್ವ ಮತ್ತು ಆಕೆಯ ಮಕ್ಕಳು ಮರಣ ಶಾಸನಕರ್ತೆ ಫಕೀರವ್ವ ಅವರ ಜೊತೆಗೆ ವಾಸಿಸುತ್ತಿದ್ದರು ಎಂಬುದನ್ನು ಪಾಟಿ ಸವಾಲಿನಲ್ಲಿ ಪಿಡಬ್ಲ್ಯು–1 ಇವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ, ಉಯಿಲು ಮಾಡಿಕೊಟ್ಟಿರುವುದು ಅಸಹಜ ಎಂಬ ವಾದದಲ್ಲಿ ಯಾವುದೇ ಹುರುಳಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.

23. ಈಗ, ಉಯಿಲನ್ನು ಯುಕ್ತವಾಗಿ ಬರೆದುಕೊಡಲಾಗಿದೆ ಎಂಬುದನ್ನು ಉಯಿಲಿನ ಪ್ರತಿಪಾದಕನು ಸಾಬೀತುಪಡಿಸಿರುವನೇ ಅಥವಾ ಇಲ್ಲವೇ ಎಂಬುದನ್ನು ನೋಡಬೇಕಿದೆ. ಡಿಡಬ್ಲ್ಯು–2 ಆದ ಪರಪ್ಪ ತಿಪ್ಪಣ್ಣ ಕುರಿ ಇವರು ದೃಢೀಕರಿಸುವ ಸಾಕ್ಷಿಯಾಗಿದ್ದಾರೆ. ತನ್ನ ಸಾಕ್ಷ್ಯದಲ್ಲಿ ಅವರು, ಯಲ್ಲಪ್ಪ ಮತ್ತು ಫಕೀರವ್ವ ಅವರ ಕೌಟುಂಬಿಕ ವ್ಯವಹಾರಗಳ ಬಗ್ಗೆ ತನಗೆ ತಿಳಿದಿದೆಯೆಂದು ಮತ್ತು ಮೊದಲನೇ ಪ್ರತಿವಾದಿಯು, ಫಕೀರವ್ವ ಇವರ ಮನೆಯಲ್ಲಿ ಅವರೊಂದಿಗೆ ಇರುತ್ತಿದ್ದನು ಎಂದು ಹೇಳಿದ್ದಾರೆ. ಲಾಲಪ್ಪ ಮತ್ತು ಯಲ್ಲಪ್ಪ ಇವರ ನಡುವೆ ಇದ್ದ ಅಪ್ಸಾತ್ ವತನಿಗೆ ಸಂಬಂಧಿಸಿದಂತೆ ಹೇಳಿಕೆಯನ್ನು ಸಹ ನೀಡಿದ್ದಾರೆ. ಫಕೀರವ್ವ ಅವರು ಉಯಿಲು ಮಾಡುವುದಕ್ಕೆ ಸಂಬಂಧಿಸಿದಂತೆ, ಉಯಿಲನ್ನು ಬರೆದುಕೊಡುವುದಕ್ಕೆ ಹಿಂದಿನ ದಿನದಂದು, ಉಯಿಲನ್ನು ಬರೆದುಕೊಡುವ ಸಂಬಂಧದಲ್ಲಿ ಆತನನ್ನು ಮತ್ತು ಇನ್ನೊಬ್ಬ ವ್ಯಕ್ತಿಯಾದ ಗಿರಿಯಪ್ಪ ಹೊಸಮನಿ ಇವರನ್ನು ಇತರ ಹಿರಿಯರೊಂದಿಗೆ ಕರೆಯಲಾಗಿತ್ತೆಂದು ಮತ್ತು ಇವರೆಲ್ಲರೊಂದಿಗೆ ಚರ್ಚೆ ನಡೆಸಿದ ನಂತರ, ಆಕೆಯು ಉಯಿಲನ್ನು ಬರೆದಿದ್ದರೆಂದು ಅವರು ನಿರ್ದಿಷ್ಟವಾಗಿ ಹೇಳಿಕೆ ನೀಡಿದ್ದಾರೆ. ಸತ್ಯವ್ವ ಅವರು ಅಪ್ರಾಪ್ತ ವಯಸ್ಕನ ಪೋಷಕಿ/ನಿರ್ವಾಹಕಿಯಾಗಿ ಕಾರ್ಯನಿರ್ವಹಿಸಲು ತನಗೆ ಇಚ್ಛೆ ಇಲ್ಲವೆಂದು ತಿಳಿಸಿದ ಪ್ರಯುಕ್ತ, ಮುತ್ತಣ್ಣನ ಅಪ್ರಾಪ್ತ ವಯಸ್ಕನ ಪೋಷಕರನ್ನಾಗಿ ಫಕೀರಪ್ಪ ಜಗಲಿ ಇವರ ಹೆಸರನ್ನು

ಸತ್ಯವ್ವ ಅವರು ನಿರ್ಧರಿಸಿದರೆಂದು ಸಹ ಅವರು ಹೇಳಿಕೆ ನೀಡಿದ್ದಾರೆ. ಅಪ್ರಾಪ್ತ ವಯಸ್ಕನ ಹೆಸರಿಗೆ ಉಯಿಲು ಮಾಡಲಿದ್ದ ಸ್ವತ್ತಿನಲ್ಲಿ ಫಕೀರಪ್ಪ ಜಗಲಿ ಇವರು ಯಾವುದೇ ಹಿತಾಸಕ್ತಿ ಅಥವಾ ಹಕ್ಕನ್ನು ಕ್ಲೇಮು ಮಾಡಿರುವುದಿಲ್ಲ ಎಂಬುದನ್ನು ಸಹ ಅವರು ಸಾಕ್ಷ್ಯದಲ್ಲಿ ಹೇಳಿದ್ದಾರೆ. ಈ ಹಿನ್ನಲೆಯಲ್ಲಿ, ಮರಣಶಾಸನಕರ್ತೆಯು ಸ್ವಸ್ಥಚಿತ್ತಳಾಗಿದ್ದಾಗಲೇ ಉಯಿಲು ಬರೆದುಕೊಟ್ಟಿರುವುದಾಗಿ ಅವರು ಹೇಳಿದ್ದಾರೆ. ಮರಣ ಶಾಸನಕರ್ತೆಗೆ ಆಕೆ ಏನನ್ನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಸಂಪೂರ್ಣವಾಗಿ ಅರಿವಿತ್ತು ಮತ್ತು ಆ ಸಮಯದಲ್ಲಿ ಯಾವುದೇ ಖಾಯಿಲೆಯಿಂದ ಬಳಲುತ್ತಿರಲಿಲ್ಲ ಎಂದು ಸಹ ಅವರು ಹೇಳಿಕೆ ನೀಡಿದ್ದಾರೆ. ಅವರು, ಉಯಿಲನ್ನು ಫಕೀರವ್ವ ಅವರು ಬರೆದ ಉಯಿಲು ಎಂದು ಗುರುತಿಸಿದ್ದಾರೆ. ನಿಶಾನೆ–ಡಿ1(ಎ)ಯಿಂದ ನಿಶಾನೆ ಡಿ1(ಸಿ) ಆಗಿ ಉಯಿಲಿನ ಎಲ್ಲಾ ಪುಟಗಳ ಮೇಲೆ ಕಂಡುಬಂದ ಮರಣ ಶಾಸನಕರ್ತೆ ಫಕೀರವ್ವ ಅವರ ಹೆಬ್ಬೆರಳಿನ ಗುರುತನ್ನು ಅವರು ಗುರುತಿಸಿದ್ದಾರೆ. ಅವರು, ಸದರಿ ಉಯಿಲಿಗೆ ದೃಢೀಕರಿಸುವ ಸಾಕ್ಷಿಯಾಗಿ ತನ್ನ ಸಹಿ ಹಾಕಿರುವುದನ್ನು ಸಹ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ತಮ್ಮ ಸಹಿಯನ್ನು ನಿಶಾನೆ ಡಿ1(ಡಿ) ಎಂದು ಗುರುತಿಸಿದ್ದಾರೆ. ಅವರು, ಮತ್ತೊಬ್ಬ ದೃಢೀಕರಿಸುವ ಸಾಕ್ಷಿಯಾದ ಗಿರಿಯಪ್ಪ ಅವರ ಸಹಿಯನ್ನು ನಿಶಾನೆ ಡಿ1(ಇ) ಎಂದು ಸಹ ಗುರುತಿಸಿದ್ದಾರೆ. ಹೊನಗಲ್ ಹೆಸರಿನ ಉಯಿಲು ಬರಹಗಾರನಿಗೆ ಉಯಿಲನ್ನು ಬರೆಯುವುದಕ್ಕಾಗಿ ಫಕೀರವ್ವ ಅವರು ಮಾಹಿತಿ ನೀಡಿದ್ದರೆಂದು, ಅವರು ಸವದತ್ತಿಯ ಉಪ–ನೋಂದಣಾಧಿಕಾರಿಗಳ ಕಚೇರಿಗೆ ಬೆಳಿಗ್ಗೆ ಸುಮಾರು 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯ ನಡುವೆ ಹೋಗಿದ್ದರೆಂದು ಮತ್ತು ಫಕೀರವ್ವ ಅವರು ಒದಗಿಸಿದ ಮಾಹಿತಿಯ ಪ್ರಕಾರ ಮಧ್ಯಾಹ್ನ 1.00 ಗಂಟೆಯಿಂದ 2.00 ಗಂಟೆಯ ನಡುವೆ ದಸ್ತಾವೇಜನ್ನು ಬರೆಯಲಾಯಿತೆಂದು ಸಹ ಅವರು ಹೇಳಿದ್ದಾರೆ.

24. ಈ ಹಂತದಲ್ಲಿ, ದೃಢೀಕರಿಸಬೇಕಾದ ಅಗತ್ಯವಿರುವ ದಸ್ತಾವೇಜನ್ನು ಬರೆಯುವ ರುಜುವಾತಿನೊಂದಿಗೆ ವ್ಯವಹರಿಸುವ ಸಾಕ್ಷ್ಯ ಅಧಿನಿಯಮ, 1872ರ

68ನೇ ಪ್ರಕರಣವನ್ನು ಮತ್ತು ಭಾರತ ಉತ್ತರಾಧಿಕಾರ ಅಧಿನಿಯಮದ 63(ಸಿ) ಪ್ರಕರಣವನ್ನು ಉಲ್ಲೇಖಿಸುವುದು ಸುಸಂಗತವಾಗಿದೆ. ಉಯಿಲನ್ನು ಬರೆದುದನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ, ಕಡೇ ಪಕ್ಷ ಒಬ್ಬ ದೃಢೀಕರಿಸುವ ಸಾಕ್ಷಿಯನ್ನು ಕರೆತರಬೇಕೆಂಬುದನ್ನು 68ನೇ ಪ್ರಕರಣವು ಕಡ್ಡಾಯಗೊಳಿಸುತ್ತದೆ. 63(ಸಿ) ಪ್ರಕರಣವು, ಉಯಿಲನ್ನು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ದೃಢೀಕರಿಸಬೇಕೆಂದು, ಅವರಲ್ಲಿ ಪ್ರತಿಯೊಬ್ಬರೂ, ಮರಣಶಾಸನಕರ್ತನು ಅಥವಾ ಮರಣಶಾಸನ ಕರ್ತನ ಸಮ್ಮುಖದಲ್ಲಿ ಮತ್ತು ಆತನು ನಿರ್ದೇಶನದಲ್ಲಿ ಬೇರೊಬ್ಬ ವ್ಯಕ್ತಿಯು ಉಯಿಲಿಗೆ ತನ್ನ ಸಹಿ ಮತ್ತು ಗುರುತನ್ನು ಹಾಕುವುದನ್ನು ನೋಡಬೇಕೆಂದು, ಅಥವಾ ಮರಣಶಾಸನಕರ್ತನು, ತನ್ನ ಸಹಿ ಅಥವಾ ಗುರುತಿನ ಅಥವಾ ಅಂಥ ಇತರ ವ್ಯಕ್ತಿಯ ಸಹಿಯ ವೈಯಕ್ತಿಕ ಸ್ವೀಕೃತಿಯನ್ನು ಸ್ವೀಕರಿಸಬೇಕೆಂದು; ಮತ್ತು ಪ್ರತಿಯೊಬ್ಬ ಸಾಕ್ಷಿಯು ಮರಣಶಾಸನಕರ್ತನ ಸಮ್ಮುಖದಲ್ಲಿ ಉಯಿಲಿಗೆ ಸಹಿ ಹಾಕತಕ್ಕದ್ದು ಎಂಬುದನ್ನು ಅಗತ್ಯಪಡಿಸುತ್ತದೆ.

25. ಪ್ರಸ್ತುತ ಮೊಕದ್ದಮೆಯಲ್ಲಿ, ದೃಢೀಕರಿಸುವ ಸಾಕ್ಷಿಯಾದ ಡಿಡಬ್ಲ್ಯು–2 ಅವರ ಸಾಕ್ಷ್ಯವು. ಅವರು ಉಪ–ನೋಂದಣಾಧಿಕಾರಿ, ಸವದತ್ತಿ ಇವರ ಕಚೇರಿಗೆ ಮರಣಶಾಸನಕರ್ತರೊಂದಿಗೆ ಬಂದಿದ್ದರೆಂಬುದನ್ನು, ಅಲ್ಲಿ, ಆಕೆಯ ಸೂಚನೆಯಂತೆ, ಉಯಿಲು ಬರಹಗಾರನು ಉಯಿಲನ್ನು ಬರಹಕ್ಕಿಳಿಸಿದನೆಂಬುದನ್ನು ಮತ್ತು ಮರಣಶಾಸನಕರ್ತೆಯು ಉಯಿಲನ್ನು ಬರೆಯುವಾಗ ಉಪ–ನೋಂದಣಾಧಿಕಾರಿಗಳ ಮುಂದೆ ಹಾಜರಿದ್ದರೆಂಬುದನ್ನು ಹಾಗೂ ದೃಢೀಕರಿಸುವ ಸಾಕ್ಷಿಯಾಗಿ ಅವರು ಉಯಿಲಿಗೆ ಸಹಿ ಹಾಕಿದ್ದರು ಎಂಬುದನ್ನು ಸುಸ್ಪಷ್ಟಗೊಳಿಸುತ್ತದೆ. ಅವರು ಮರಣಶಾಸನಕರ್ತೆಯ ಹೆಬ್ಬೆರಳಿನ ಗುರುತನ್ನು ಮತ್ತು ತನ್ನ ಸ್ವಂತ ಸಹಿಯನ್ನು ಹಾಗೂ ಮತ್ತೊಬ್ಬ ದೃಢೀಕರಿಸುವ ಸಾಕ್ಷಿಯ ಸಹಿಯನ್ನು ಸಹ ಗುರುತಿಸಿದ್ದಾರೆ. ಅಂಥ ಸಂದರ್ಭದಲ್ಲಿ, ಭಾರತ ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣದ ಮತ್ತು ಭಾರತ ಉತ್ತರಾಧಿಕಾರ ಅಧಿನಿಯಮದ 63(ಸಿ) ಪ್ರಕರಣದ ಅಗತ್ಯತೆಯನ್ನು ಪಾಲಿಸಲಾಗಿದೆ. ಆದುದರಿಂದ, ಉಯಿಲಿನ್ನು ಯುಕ್ತವಾಗಿ ಬರೆಯಲಾಗಿದೆ ಮತ್ತು

ಯುಕ್ತವಾಗಿ ದೃಢಿಕರಿಸಲಾಗಿದೆ ಎಂಬುದು ಸಾಬೀತಾಗಿಲ್ಲವೆಂಬ ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಮಾಡಿರುವ ವಾದದಲ್ಲಿ ಯಾವುದೇ ಗುಣಾರ್ಹತೆಗಳಿಲ್ಲ.

26. ಕರ್ನಾಟಕ ನೋಂದಣಿ ನಿಯಮಗಳು, 1965ರ 73ನೇ ನಿಯಮದ ಕಡ್ಡಾಯ ಅಗತ್ಯತೆಗಳನ್ನು ಪಾಲಿಸಿರುವುದಿಲ್ಲವೆಂದು ಅಪೀಲುದಾರರ ಪರ ನ್ಯಾಯವಾದಿಗಳು ವಾದಿಸಿದ ಅಂಶದ ಕಡೆಗೆ ಗಮನ ಹರಿಸುವುದಾದರೆ, ಉಪ–ನೋಂದಣಾಧಿಕಾರಿಗಳು, ಅನಕ್ಷರಸ್ಥೆಯಾದ ಮರಣಶಾಸನಕರ್ತೆಗೆ ದಸ್ತಾವೇಜಿನಲ್ಲಿರುವ ಒಳಾಂಶಗಳ ಬಗ್ಗೆ ವಿವರಿಸಿ ಹೇಳಿರುವುದಿಲ್ಲ ಎಂಬುವಷ್ಟರಮಟ್ಟಿಗೆ, ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ಸೂಕ್ತವಾಗಿ ವಾದಿಸಿದಂತೆ, ಉಯಿಲು ಕಡ್ಡಾಯವಾಗಿ ನೋಂದಣಿಯಾಗಬಹುದಾದ ದಸ್ತಾವೇಜಾಗಿರುವುದಿಲ್ಲ. ಉಯಿಲಿನ ಸಾಕ್ಷ್ಯ ಉಪ–ನೋಂದಣಾಧಿಕಾರಿಗಳು ಹಿಂಬರಹ ಮಾಡಿದ್ದರ ಮೇಲೆ ಆಧಾರವಾಗಿರುವುದಿಲ್ಲ. ಭಾರತ ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣದ ಮತ್ತು ಭಾರತ ಉತ್ತರಾಧಿಕಾರ ಅಧಿನಿಯಮದ 63ನೇ ಪ್ರಕರಣದ ಅಗತ್ಯತೆಗಳಷ್ಟರಮಟ್ಟಿಗೆ, ಉಯಿಲಿನಲ್ಲಿರುವ ಒಳಾಂಶಗಳನ್ನು ಓದಿ ಹೇಳುವುದಕ್ಕೆ ಮತ್ತು ಅವುಗಳನ್ನು ಮರಣಶಾಸನಕರ್ತೆಗೆ ವಿವರಿಸಿ ಹೇಳುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಅವುಗಳನ್ನು ಯುಕ್ತವಾಗಿ ಪಾಲಿಸಲಾಗಿದೆ ಹಾಗೂ ಉಯಿಲನ್ನು ಬರೆದಿರುವುದನ್ನು ಮತ್ತು ದೃಢೀಕರಿಸುವುದನ್ನು ಸಾಬೀತುಪಡಿಸಲಾಗಿದ್ದು, ಉಪ–ನೋಂದಣಾಧಿಕಾರಿಗಳು ಯಾವುದೇ ಹಿಂಬರಹ ಬರೆದಿಲ್ಲ ಎಂಬುದಾಗಲಿ ಮತ್ತು ಮರಣಶಾಸನಕರ್ತೆಗೆ ಉಯಿಲಿನ ಒಳಾಂಶಗಳನ್ನು ಓದಿ ಹೇಳಿರುವುದಕ್ಕೆ ಮತ್ತು ಅವುಗಳನ್ನು ವಿವರಿಸಿರುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ಹೇಳಿಕೆ ನೀಡಿಲ್ಲವೆಂಬುದಾಗಲಿ, ಯಾವುದೇ ರೀತಿಯಲ್ಲೂ ಉಯಿಲನ್ನು ಅಸಿಂಧುವನ್ನಾಗಿಸುವುದಿಲ್ಲ. ***ಶಿವಾಜಿ ರಾವ್ ಎಮ್.ವಿ. –ವಿರುದ್ಧ– ಕೆ.ಎಸ್. ನಾರಾಯಣ ರಾವ್ ಮತ್ತು ಇತರರು,*** ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಪಿನ ಬಗ್ಗೆ ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಇರಿಸಿದ ವಿಶ್ವಾಸವು, ಪ್ರಸ್ತುತ ಮೊಕದ್ದಮೆಯ ವಾಸ್ತವಾಂಶಗಳು ಮತ್ತು

ಸಂದರ್ಭಗಳಿಗೆ ಸಮಂಜವೆನಿಸುವುದಿಲ್ಲ. ಸದರಿ ಮೊಕದ್ದಮೆಯಲ್ಲಿ ಇರುವ ವಿವರವಾದ ಅಂಶಗಳು ಮತ್ತು ಕಾನೂನಿನ ವಾದಗಳ ವ್ಯಾಪ್ತಿಯನ್ನು, ವರದಿಯಲ್ಲಿ ಇರುವ ಮುಖ್ಯ ಟಿಪ್ಪಣಿಯ ಭಾಗವನ್ನು, ಅದೂ ಕೂಡ ತೀರ್ಪುಗಳ ಸಂಕ್ಷಿಪ್ತ ಟಿಪ್ಪಣಿಗಳನ್ನು ನ್ಯಾಯಾಲಯದ ಅವಗಾಹನೆಗೆ ಮಂಡಿಸಿದ ಮಾತ್ರಕ್ಕೆ, ಅಲ್ಲಿ ವಿಧಿಸಲಾದ ತತ್ವಗಳು, ನ್ಯಾಯಾಲಯದ ಮುಂದೆ ಮಂಡಿಸಿಲ್ಲವಾದಾಗ್ಯೂ, ಯುಕ್ತ ನೋಂದಣಿಯನ್ನು ಸಾಬೀತುಪಡಿಸದಿದ್ದಲ್ಲಿ, ಉಯಿಲು ಬರೆದಿರುವುದನ್ನು ಅನ್ಯಥಾ ಸಾಬೀತುಪಡಿಸುವುದಕ್ಕೆ ತೀರ್ಮಾನಿಸಲು ಸಾಧ್ಯವಿಲ್ಲವೆಂಬ ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳ ವಾದಕ್ಕೆ ಪುಷ್ಟಿ ನೀಡುವುದಿಲ್ಲ.

27. ಇನ್ನೊಂದೆಡೆ, ***ಭಗತ್ ರಾಮ್ ಮತ್ತು ಇನ್ನೊಬ್ಬರು, ಅಪೀಲುದಾರರು –ವಿರುದ್ಧ– ಸುರೇಶ್ ಮತ್ತು ಇತರರು,*** ಪ್ರತಿವಾದಿಗಳು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ವಿಶ್ವಾಸವಿರಿಸಿದ ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ಸೂಕ್ತವಾಗಿಯೇ ವಾದಿಸಿದಂತೆ, ತನ್ನ ಶಾಸನಾತ್ಮಕ ಕರ್ತವ್ಯ ನಿರ್ವಹಣೆಯಲ್ಲಿ ಒಂದು ದಸ್ತಾವೇಜನ್ನು ನೋಂದಾಯಿಸಿದ ದಾಖಲೆಗಳ ನೋಂದಣಿಕಾರರು ದಸ್ತಾವೇಜಿನ ನೋಂದಣಿಗೆ ಸಂಬಂಧಿಸಿದ ಶಾಸನಾತ್ಮಕ ಕರ್ತವ್ಯಗಳನ್ನು ಅವರು ನಿರ್ವಹಿಸಿರುವ ಕಾರಣ ಮಾತ್ರದಿಂದ ಉಯಿಲು ಪತ್ರಕ್ಕೆ ದೃಢೀಕರಿಸುವ ಸಾಕ್ಷಿಯಾಗುವುದಿಲ್ಲ. ಯಾವುದೇ ಉಯಿಲಿನ ನೋಂದಣಿ ಮತ್ತು ತನ್ನ ಶಾಸನಾತ್ಮಕ ಕರ್ತವ್ಯ ನಿರ್ವಹಣೆಯಲ್ಲಿ ಮಾಡಿದ ಹಿಂಬರಹಗಳು, 'ಶಾಸನಾತ್ಮಕ ದೃಢೀಕರಣ ಸಾಕ್ಷಿ'ಯ ಸ್ಥಾನಮಾನಕ್ಕೆ ಅವರನ್ನು ಏರಿಸುವುದಿಲ್ಲ.

28. ಈ ತೀರ್ಪಿನ 23ನೇ ಕಂಡಿಕೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು, ಒಂದು ದಸ್ತಾವೇಜಿನ (ಉಯಿಲು) ನೋಂದಣಿಯು, ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಸಾಬೀತುಪಡಿಸಬೇಕಾದ ಕಾನೂನು ಅಗತ್ಯತೆಯಾಗಿ, ಒಂದು ದಸ್ತಾವೇಜನ್ನು ಬರೆದಿರುವುದನ್ನು ಮತ್ತು ದೃಢೀಕರಿಸಿರುವುದನ್ನು ಸಾಬೀತುಪಡಿಸುವ ಅವಶ್ಯಕತೆಯಿಂದ ವಿನಾಯಿತಿ

ನೀಡುವುದಿಲ್ಲವೆಂದು ಸಮರ್ಥವಾಗಿ ತೀರ್ಪು ನೀಡಿದೆ. ಮುಂದುವರಿದು, ಸರ್ವೋಚ್ಚ ನ್ಯಾಯಾಲಯವು, ನೋಂದಣಿ ಅಧಿನಿಯಮದ 58ನೇ ಪ್ರಕರಣವನ್ನು ಉಲ್ಲೇಖಿಸಿ, ನೋಂದಣಿ ಅಧಿನಿಯಮದ ಅನುಸಾರ ದಾಖಲೆಗಳ ನೋಂದಣಿಯ ಮೂಲಕ ಮಾಡಬಹುದಾದುದಕ್ಕೆ ಯಾವುದೇ ಹಿಂಬರಹಗಳು ಅಗತ್ಯವಿಲ್ಲವೆಂದಿದ್ದಾಗ್ಯೂ ನೋಂದಣಿಗೆ ಅಂಗೀಕರಿಸಿದ ಪ್ರತಿಯೊಂದು ದಸ್ತಾವೇಜಿನ ಮೇಲೆ ನೋಂದಣಿ ಅಧಿಕಾರಿಯು ಕೆಲವು ವಿವರಗಳನ್ನು ದಾಖಲಿಸುವುದು ಅಗತ್ಯವಾಗಿರುತ್ತದೆ, ಉತ್ತರಾಧಿಕಾರ ಅಧಿನಿಯಮದ 63(ಸಿ) ಪ್ರಕರಣ ಅಥವಾ ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ದೃಢೀಕರಣದ ವಾಸ್ತವಾಂಶವನ್ನು ಪರ್ಯಾಲೋಚಿಸಿದಲ್ಲಿ, ನೋಂದಣಿ ಸಮಯದಲ್ಲಿ ಮಾಡಿದ ಹಿಂಬರಹಗಳು ನೋಂದಣಿ ವಿಷಯಗಳಿಗೆ ಮಾತ್ರ ಪ್ರಸಕ್ತವಾಗಿರುತ್ತವೆ ಎಂದು ಅಭಿಪ್ರಾಯಪಟ್ಟಿದೆ. ಉಯಿಲನ್ನು ನೋಂದಣಿ ಮಾಡುವ ಉಪ-ನೋಂದಣಾಧಿಕಾರಿಯು ಯಾವ ಸಂದರ್ಭದ ಮೇರೆಗೆ ವ್ಯವಹರಿಸಿರುವನೋ ಅದರ ಮೇರೆಗೆ, ಆ ಪ್ರಕರಣದಲ್ಲಿ ನಿರ್ದಿಷ್ಟ ಮೊಕದ್ದಮೆಗಳಲ್ಲಿ ದೃಢೀಕರಣ ಸಾಕ್ಷಿಯ ಅಗತ್ಯತೆಯನ್ನು ಪಾಲಿಸಬಹುದಾಗಿದೆಯೇ ಹೊರತು ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ನಮಗೆ ಅದು ಸಂಬಂಧಪಟ್ಟಿಲ್ಲವೆಂದು ಸಹಾ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

29. ಭಾರತ ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣ ಮತ್ತು ಭಾರತ ಉತ್ತರಾಧಿಕಾರ ಅಧಿನಿಯಮದ 63(ಸಿ) ಪ್ರಕರಣದ ಉಪಬಂಧಗಳನ್ನು ಪಾಲಿಸುವುದನ್ನವಲಂಬಿಸಿ, ಉಯಿಲನ್ನು ಯುಕ್ತವಾಗಿ ಬರೆಯಲಾಗಿದೆ ಮತ್ತು ದೃಢೀಕರಿಸಲಾಗಿದೆ ಎಂದು ಅಭಿಪ್ರಾಯಪಟ್ಟರಷ್ಟೇ ಸಾಕು. ಪ್ರಸ್ತುತ ಸಂದರ್ಭದಲ್ಲಿ, ಉಯಿಲನ್ನು ಯುಕ್ತವಾಗಿ ಬರೆದಿರುವುದಕ್ಕೆ ಮತ್ತು ದೃಢೀಕರಿಸಿರುವುದಕ್ಕೆ ಸಂಬಂಧಿಸಿದಂತೆ ದೃಢೀಕರಿಸುವ ಸಾಕ್ಷಿಯು ಸ್ಪಷ್ಟವಾಗಿ ಮಾತನಾಡಿರುವುದರಿಂದ, ನಿಶಾನೆ ಡಿ-1-ಉಯಿಲನ್ನು ಪ್ರತಿವಾದಿಗಳು ಸೂಕ್ತವಾಗಿ ಸಾಬೀತುಪಡಿಸಿರುವರೆಂದು ಕೆಳಗಿನ ನ್ಯಾಯಲಾಯವು ದಾಖಲಿಸಿದ ನಿರ್ಣಯಗಳನ್ನು ನಾವು ಸಂಶಯಾತೀತವಾಗಿ ಒಪ್ಪುತ್ತೇವೆ.

30. ಶಸ್ತ್ರಚಿಕಿತ್ಸಾ ಶುಶ್ರೂಷಾ ಗೃಹ (ಸರ್ಜಿಕಲ್ ನರ್ಸಿಂಗ್ ಹೋಮ್), ಸವದತ್ತಿ ಇದರ ವೈದ್ಯರಾದ ಡಾ|| ಸಿ. ಬಿ. ನಾವಡಗಿ ಅವರು ನೀಡಿದ ವೈದ್ಯಕೀಯ ಪ್ರಮಾಣಪತ್ರ ನಿಶಾನೆ ಪಿ.17ನ್ನು ಆಧರಿಸಿ ಮಾಡಿದ ಇನ್ನೊಂದು ವಾದವನ್ನು ಕುರಿತು ವ್ಯವಹರಿಸಬೇಕಾದ ಅಗತ್ಯವಿದೆ. ಪ್ರಮಾಣಪತ್ರವು, ಮರಣಶಾಸನಕರ್ತೆಯನ್ನು ದಿನಾಂಕ: 21.03.2008ರಂದು ಆಸ್ಪತ್ರೆಗೆ ಸೇರಿಸಲಾಗಿತ್ತೆಂದು ಮತ್ತು ಆಕೆಯು ದಿನಾಂಕ: 27.03.2008ರಂದು ಮರಣ ಹೊಂದಿರುವಳೆಂಬುದನ್ನು ಬಹಿರಂಗಪಡಿಸುತ್ತದೆ. ಆಕೆಯು ಕಿಬ್ಬೊಟ್ಟೆ ಪದರದ ಉರಿಯೂತದೊಂದಿಗೆ ತೀವ್ರ ಪ್ಲೂರದ ಹರಿವಿನಿಂದ ಬಳಲುತ್ತಿದ್ದಳೆಂದು ನಿಶಾನೆ ಪಿ–17ರ ಒಳಾಂಶದಿಂದ ಬಹಿರಂಗವಾಗುತ್ತದೆ. ಮರಣಶಾಸನಕರ್ತೆ ಫಕೀರವ್ವ ಅವರು ಉತ್ತಮ ಮಾನಸಿಕ ಆರೋಗ್ಯವನ್ನು ಹೊಂದಿರಲಿಲ್ಲ ಮತ್ತು ತನ್ನ ಕಾರ್ಯಗಳ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಲು ಸಮರ್ಥಳಿರಲಿಲ್ಲ ಎಂಬುದನ್ನು ತೋರಿಸುವಂಥದ್ದೇನು ಈ ಪ್ರಮಾಣಪತ್ರದಲ್ಲಿ ಇಲ್ಲ. ವೈದ್ಯಕೀಯ ಪ್ರಮಾಣಪತ್ರವನ್ನು ಹಾಜರುಪಡಿಸಿರುವುದನ್ನು ಹೊರತುಪಡಿಸಿ, ಮರಣಶಾಸನಕರ್ತೆಯ ದೈಹಿಕ ಮತ್ತು ಮಾನಸಿಕ ಸ್ಥಿತಿಗತಿಯನ್ನು ತಿಳಿಸುವ ದಾಖಲೆಗಳನ್ನು ಮಂಡಿಸಲು ವಾದಿಗಳು ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ನಿಶಾನೆ ಪಿ.17 ವೈದ್ಯಕೀಯ ಪ್ರಮಾಣಪತ್ರ ನೀಡಿರುವ ವೈದ್ಯರನ್ನು ವಿಚಾರಣೆ ಮಾಡಿರುವುದಿಲ್ಲ. ಇನ್ನೊಂದೆಡೆ, ಮರಣಶಾಸನಕರ್ತೆಯು ಉತ್ತಮ ಮಾನಸಿಕ ಸ್ಥಿತಿ ಹೊಂದಿದ್ದರು ಮತ್ತು ಆಕೆಯು ಸ್ವತಃ ದೃಢೀಕರಿಸುವ ಸಾಕ್ಷಿಯನ್ನು ಮತ್ತು ಇತರ ಹಿರಿಯರನ್ನು ಉಯಿಲನ್ನು ಬರೆಯುವ ಸಂಬಂಧವಾಗಿ ತನ್ನ ಮನೆಗೆ ಬರುವಂತೆ ಕೋರಿಕೊಂಡಿದ್ದರೆಂದು ಮತ್ತು ಉಯಿಲನ್ನು ಬರೆಯುವಂತೆ ಆಕೆ ಸ್ವತಃ ಉಯಿಲು ಬರಹಗಾರನಿಗೆ ಸೂಚನೆಗಳನ್ನು ನೀಡಿದ್ದರೆಂದು ದೃಢೀಕರಿಸುವ ಸಾಕ್ಷಿಯು ಸ್ಪಷ್ಟವಾಗಿ ಹೇಳಿದ್ದಾರೆ. ಅಂಥ ಸಂದರ್ಭದಲ್ಲಿ, ಉಯಿಲನ್ನು ಬರೆಸಿದ ಫಕೀರವ್ವ ಅವರು ಉತ್ತಮ ಮಾನಸಿಕ ಮತ್ತು ದೈಹಿಕ ಸ್ಥಿತಿಯನ್ನು ಹೊಂದಿರದೆ ಇದ್ದಾಗ ಬರೆಸಲಾಯಿತು ಎಂದು ತೀರ್ಮಾನಿಸಲು ನಿಶಾನೆ ಪಿ.17 ಆಧಾರವನ್ನು ರೂಪಿಸುವುದಿಲ್ಲ.

31. ವಾದಪತ್ರಗಳಲ್ಲಿ ಮತ್ತು ಸಾಕ್ಷ್ಯದಲ್ಲಿ ಇರುವಷ್ಟರಮಟ್ಟಿಗೆ, ದಾವೆ ನಿಗದಿ ಸ್ವತ್ತುಗಳ ಸ್ವರೂಪಕ್ಕೆ ಸಂಬಂಧಿಸಿದಂತೆ, ವಾದಪತ್ರಗಳು ಮತ್ತು ನಿಶಾನೆ ಡಿ.1ರ ಒಳಾಂಶಗಳ ನಡುವೆ ವ್ಯತ್ಯಾಸವಿದೆ ಎಂಬುದು ಮಾನ್ಯ ನ್ಯಾಯವಾದಿಗಳು ಮಂಡಿಸಿದ ಕೊನೆಯ ವಾದವಾಗಿದ್ದು, ಸ್ವತ್ತಿನ ಹಂಚಿಕೆಯಾಗಿತ್ತೆಂದು (ಅಪ್ಪಾತ್ ವತನಿ) ಮತ್ತು ಉಯಿಲಿನಲ್ಲಿರುವ ಒಕ್ಕಣೆಯು, ದಾವಾ ಸ್ವತ್ತುಗಳಲ್ಲಿ ವಿಭಜನೆಯಾಗದ ಅರ್ಧ ಪಾಲನ್ನು ಪ್ರತಿವಾದಿ ಸಂಖ್ಯೆ-1 ಈತನಿಗೆ ಉಯಿಲು ಮಾಡಿಕೊಡಲಾಗಿತ್ತೆಂಬುದನ್ನು ಬಹಿರಂಗಪಡಿಸುತ್ತದೆ ಎಂದು ಪ್ರತಿವಾದಿಗಳು ವಾದಿಸಿದ್ದಾರೆ.

32. ವಾದಿಗಳು ದಾವೆ ಸ್ವತ್ತಿನ ನಿರುಪಾಧಿಕ ಮಾಲೀಕರೇ ಮತ್ತು ಫಕೀರವ್ವ ಅವರು ಬರೆದುಕೊಟ್ಟ ಉಯಿಲು ಸಿಂಧುವಾದುದೇ ಎಂಬುದು ಪರಿಗಣಿಸಬೇಕಾದ ವಿವಾದವಾಗಿದೆ. ಸಹೋದರರಿಬ್ಬರೂ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂಬುದು ಸ್ಪಷ್ಟ ಸಂಗತಿ. ಅವರು ಸ್ವತ್ತಿನಲ್ಲಿನ ತಮ್ಮ ನಿಶ್ಚಿತ ಪಾಲನ್ನು ಅನುಭವಿಸುತ್ತಿದ್ದರು ಮತ್ತು ಯಲ್ಲಪ್ಪ ಅವರ ಮರಣಾ ನಂತರ, ಫಕೀರವ್ವ ಅವರು ಸ್ವತ್ತಿನಲ್ಲಿನ ತನ್ನ ಪಾಲನ್ನು ಅನುಭವಿಸುತ್ತಿದ್ದರು. ಆದಾಗ್ಯೂ, ಡಿಡಬ್ಲ್ಯು-4 ಇವರ ಸಾಕ್ಷ್ಯವು, ಫಕೀರವ್ವ ಇವರ ಹೆಸರಿನಲ್ಲಿದ್ದ ಆಕೆಯ ಪಾಲಿಗೆ ಬಂದಿದ್ದಂಥ ಜಮೀನುಗಳಲ್ಲಿ ಅವರು ಸಾಗುವಳಿ ಮಾಡುತ್ತಿದ್ದರೆಂಬುದನ್ನು ತೋರಿಸುತ್ತದೆ. ಆದ್ದರಿಂದ, ಪಿಡಬ್ಲ್ಯು-1 ಇವರ ಪಾಟಿ ಸವಾಲಿನಲ್ಲಿ ಒಪ್ಪಿಕೊಂಡಿರುವುದನ್ನು ಒಳಗೊಂಡು ದಾಖಲೆಯಲ್ಲಿನ ಮುಖ್ಯ ಸಂಗತಿಗಳು, ಸಹೋದರರಿಬ್ಬರೂ ಅವರಿಗೆ ಸಂಬಂಧಿಸಿದ ಪಾಲುಗಳ ಪೈಕಿಯಿಂದ ಅವರವರ ಭಾಗಗಳನ್ನು ಪರಭಾರೆ ಮಾಡುವ ಮೂಲಕ ಅವರವರಿಗೆ ಸಂಬಂಧಿಸಿದ ಪಾಲುಗಳೊಂದಿಗೆ ವ್ಯವಹರಿಸುತ್ತಿದ್ದರೆಂಬುದು ಕಂಡುಬರುತ್ತದೆ. ಇದು, ಅವರು ಸ್ವತ್ತುಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದರೆಂಬ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಕುಟುಂಬದಲ್ಲಿ ಗಡಿಗಳು ಮತ್ತು ಗಡಿಕಲ್ಲುಗಳ ಮೂಲಕ ಭಾಗವಾಗಿತ್ತೇ ಎಂಬ ಪ್ರಶ್ನೆಯು ಈ ಮೊಕದ್ದಮೆಯಲ್ಲಿ ಪರ್ಯಾಲೋಚನೆಗೆ ಉದ್ಭವಿಸುವುದಿಲ್ಲ. ಸಂಬಂಧಪಟ್ಟ ಪಕ್ಷಕಾರರು ಅನುಭವಿಸುತ್ತಿದ್ದರೆಂಬ ಸ್ವತ್ತಿನೊಂದಿಗೆ ಅವರು ವ್ಯವಹರಿಸುತ್ತಿದ್ದರು ಮತ್ತು ಅದಕ್ಕನುಸಾರವಾಗಿ, ಫಕೀರವ್ವ ಅವರು ತನ್ನ

ಸ್ವಾಧೀನದಲ್ಲಿದ್ದ ಭಾಗವನ್ನು ಉಯಿಲು ಮಾಡಿಕೊಟ್ಟಿದ್ದರು ಹಾಗೂ ಪ್ರತಿವಾದಿ ಮುತ್ತಣ್ಣನ ಹೆಸರಿನಲ್ಲಿ ತನ್ನ ಪತಿಯ ಮರಣಾ ನಂತರ ಆಕೆ ಉತ್ತರಾಧಿಕಾರಿಯಾಗಿ ಅನುಭವಿಸುತಿದ್ದರು ಎಂಬ ವಾಸ್ತವಾಂಶ ಉಳಿಯುತ್ತದೆ. ಆದುದರಿಂದ, ಪ್ರತಿವಾದಿಗಳು ಸ್ವತ್ತುಗಳ ನಿರುಪಾಧಿಕ ಮಾಲೀಕರು ಮತ್ತು ವಿವಾದದಲ್ಲಿರುವ ಉಯಿಲನ್ನು ಫಕೀರವ್ವ ಅವರು ಯುಕ್ತವಾಗಿ ಬರೆದಿಲ್ಲ ಎಂದು ಅವರು ಮಾಡಿದ ಕ್ಲೇಮು ಸಮರ್ಥನೀಯವಾಗಿರುವುದಿಲ್ಲ.

33. ಕೆಳ ನ್ಯಾಯಾಲಯವು ವಿಷಯದ ಎಲ್ಲಾ ಅಂಶಗಳನ್ನು ಪರ್ಯಾಲೋಚಿಸಿದೆ ಮತ್ತು ದಾವೆಯನ್ನು ಸೂಕ್ತವಾಗಿಯೇ ವಜಾಗೊಳಿಸಿದೆ. ದಾಖಲೆಯಲ್ಲಿರುವ ಇಡೀ ಸಾಕ್ಷ್ಯದ ಮರುನಿರ್ಣಯದ ನಂತರ, ವಿಚಾರಣಾ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳನ್ನು ಒಪ್ಪದಿರಲು ನಮಗೆ ನಿಸ್ಸಂಶಯವಾಗಿಯೂ ಯಾವುದೇ ಕಾರಣವಿರುವುದಿಲ್ಲ. ಆದುದರಿಂದ, ಈ ಅಪೀಲು ವಿಫಲವಾಗಿದ್ದು, ಅದನ್ನು ವಜಾಗೊಳಿಸಲಾಗಿದೆ.

ಮೊಕದ್ದಮೆಯ ಸಂದರ್ಭಗಳಲ್ಲಿ, ಪಕ್ಷಕಾರರು ಅವರವರ ವೆಚ್ಚಗಳನ್ನು ಅವರೇ ಭರಿಸತಕ್ಕದ್ದು.

---